
ಜನಪದ ವಿಚಾರ

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೫ ನವಂಬರ್-೨೦೦೪ ಸಂಚಿಕೆ-೪



ಶಾಲೆಯೆಂಬಾ ಪಂಜರ ಸೇರಬಯಸದಾ ಹಕ್ಕಿಗಳು

1) ಶಾಲೆಯೆಬಾ ಪಂಜರ ಸೇರಬಯಸದಾ ಹಕ್ಕಿಗಳು

-ಸುರೇಂದ್ರ ಕೌಲಗಿ

ಇಂದಿನ ಶಿಕ್ಷಣ ವ್ಯವಸ್ಥೆಯು ಶಿಶುವಿಹಾರದಿಂದ ವಿಶ್ವವಿದ್ಯಾನಿಲಯದವರೆಗಿನ ಎಲ್ಲ ಪ್ರಕಾರದ ಶಿಕ್ಷಣ ಸಂಸ್ಥೆಗಳನ್ನು ಪಂಜರಸ್ವರೂಪವನ್ನಾಗಿಯೂ, ಅಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳನ್ನು ಹಕ್ಕಿಗಳ ಸ್ವರೂಪವನ್ನಾಗಿಯೂ ಮಾಡಿದೆ. ತತ್ಪರಿಣಾಮವಾಗಿ ವಿದ್ಯಾಸಂಸ್ಥೆಗಳು ಕೇವಲ ಕಟ್ಟಡಗಳಾಗಿ ನಿಂತುಕೊಂಡಿದ್ದರೆವಿದ್ಯಾರ್ಥಿಗಳು ತಮ್ಮ ಅಂತಃ ಶಕ್ತಿಯನ್ನು ಕಳೆದುಕೊಂಡ, ಪುರುಷಾರ್ಥಹೀನ ವ್ಯಕ್ತಿಗಳಾಗಿ ಈ ಭೂಮಿಯ ಮೇಲೆ ಚಲಿಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿಯ ಇಂಥ ಹೃದಯ ವಿದ್ರಾವಕ ಸ್ಥಿತಿಯನ್ನು ಕುರಿತಾದ ಅಳಲು ಈ ಲೇಖನದಲ್ಲಿದೆ ಪುಟ-೩.

2) ಚೀನಾದ ಕ್ರಾಂತಿಕಾರಿ ಡೇಂಗ್‌ಜಿಯೋಪಿಂಗ್; ಒಂದು ಸ್ಮರಣೆ

-ರವೀಂದ್ರ ಶರ್ಮ.

ವಿಶ್ವದ ಮಹಾನ್ ರಾಷ್ಟ್ರಗಳಲ್ಲಿ ಒಂದಾಗಿ ಚೀನಾ ಹೊರಹೊಮ್ಮುತ್ತಿದೆ. ಅದು ಇಂದು ತನ್ನ ಬೆಳವಣಿಗೆಯ ಸಂಕ್ರಾಂತಿ ಕಾಲದಲ್ಲಿದೆ. ಸಾಮ್ಯವಾದವನ್ನು ಬಿಡಲಾಗದೆ, ಪ್ರಜಾತಂತ್ರವನ್ನು ಕಟ್ಟಿಕೊಳ್ಳಲಾಗದೆ ಅತಂತ್ರ ಪರಿಸ್ಥಿತಿಯಲ್ಲಿದೆ. ಇಂಥ ವಿಚಿತ್ರ ಪರಿಸ್ಥಿತಿಯಿಂದ ಚೀನಾವನ್ನು ಹೊರಗೆ ತರಲು ಪ್ರಯತ್ನಿಸಿದ ಆ ದೇಶದ ಹಿರಿಯ ನಾಯಕ ಡೆಂಗ್‌ಜಿಯೋಪಿಂಗ್. ಆತನ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಆ ರಾಷ್ಟ್ರದ ನೆರೆಯರಾದ ಭಾರತೀಯರು ಡೆಂಗ್‌ರ ಬಗ್ಗೆ ತಿಳಿಯಬೇಕಾದುದು ಅಗತ್ಯ. ಆ ಒಂದು ಪ್ರಯತ್ನವಾಗಿ ಈ ಲೇಖನ. ಪುಟ-೭

3) ಇಂದಿನ ಮಕ್ಕಳು ಮತ್ತು ಕನ್ನಡ

-ಟಿ.ವಿ. ಶ್ರೀನಾಥ ಶಾಸ್ತ್ರೀ

ಮಕ್ಕಳ ದಿನಾಚರಣೆಯು ಬಂದಿದೆ, ಕನ್ನಡರಾಜ್ಯೋತ್ಸವೂ ಬಂದಿದೆ. ಕನ್ನಡದ ಮಕ್ಕಳು ಇಂಗ್ಲೀಷ್ ಭಾಷಾ ವ್ಯಾಮೋಹದಿಂದ ಹೇಗೆ ತೊಳಲಾಡುತ್ತಿದ್ದಾರೆಂಬ ವಿಚಾರ ಈ ಲೇಖನದಲ್ಲಿದೆ. ಪುಟ-೧೫

4) ತಂದೆ ತಾಯಿಗಳ ಗಮನಕ್ಕೆ

ಅನು-ಸು.ಕೌ.

ಈ ಲೇಖನದ ಲೇಖಕರಾದ ಕ್ಲಾಡ್ ಮತ್ತು ನೋರ್ಮ ಆಲ್ವಾರಿಸ್ ತಮ್ಮ ಮಗ ರಾಹುಲನಿಗೆ ಯಾವ ಬಗೆಯ ಶೈಕ್ಷಣಿಕ ಸ್ವಾತಂತ್ರ್ಯ ಕೊಟ್ಟಿದ್ದರೆಂಬುದು ಬೇರೆಲ್ಲ ತಂದೆ-ತಾಯಿಗಳಗಮನಕ್ಕೆ ಬರುವುದು ಸೂಕ್ತ. ಪುಟ-೧೯

5) ಭಾರತೀಯ ಸಂಸ್ಕೃತಿಯನ್ನು ಬೆಳಗಿಸುತ್ತಿರುವ ಮಕ್ಕಳು

-ಸುರೇಂದ್ರ ಕೌಲಗಿ.

ಅಷ್ಟಾವಕ್ರ, ನಚಿಕೇತ. ಅಭಿಮನ್ಯು. ಧ್ರುವ, ಶ್ರೀಕೃಷ್ಣ, ಸತ್ಯಕಾಮ, ಪ್ರಹ್ಲಾದ, ಭೀಮ್, ಮೋಹನ. ಈ ಎಲ್ಲ ಬಾಲಕರು ಭಾರತೀಯ ಸಂಸ್ಕೃತಿಯನ್ನು ಇಂದಿಗೂ ಬೆಳಗಿಸುತ್ತಿದ್ದಾರೆ. ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಈ ಬಾಲಕರನ್ನು ಈ ಲೇಖನದಲ್ಲಿ ನೆನೆಯಲಾಗಿದೆ.

ಪುಟ-೨೪

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವಂಬರ್-೨೦೦೪
ಸಂಪುಟ ೫
ಸಂಚಿಕೆ ೪

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ (08236)298754

e-mail - janapada@yahoo.com

ಪ್ರಾರ್ಥನೆ

ಏನು ಬಲ್ಲೆ ಹರಿಯೆ ನಿನ್ನ ಸ್ತುತಿಸಿ ಕೇಳುವುದು
ಜ್ಞಾನ ಭಕ್ತಿ ಕೊಡು ನಮಗಿದೊಂದೆ ದೊಡ್ಡದು
ಒಂದು ನೆವದಿಂದ ಎನ್ನ ಕಾಡಿದವರಿಗೆ
ಹೊನ್ನು ಹೆಣ್ಣು ಗಂಡು ಮಕ್ಕಳು ಆಗಲಿ ಅವರಿಗೆ
ಕಂದಿ ಕುಂದಿ ಎನ್ನ ಬಾಧೆ ಪಡಿಸಿದವರಿಗೆ
ಕನ್ಯಾದಾನದ ಫಲ ಬಂದು ತಟ್ಟಲಿ ಅವರಿಗೆ
ಹಿಂದೆ ಎನ್ನ ಬೈದವರೆಲ್ಲ ಚನ್ನಾಗಿರಲಿ
ಮುಂದೆ ಎನ್ನ ಬೈದವರೆಲ್ಲ ಅಂದಣವೇರಲಿ
ಕುಂದು ಇಟ್ಟವರೆಲ್ಲ ಕುದುರೆಯ ಚೇಳಿಯಲಿ
ಜನರೊಳಗೆ ಮಾನಭಂಗ ಮಾಡಿದವರಿಗೆ
ಜೇನುತುಪ್ಪ ಸಕ್ಕರೆ ಊಟ ಆಗಲಿ ಅವರಿಗೆ
ಹಾನಿ ಬಾರದಂಥ ಲೋಕ ಆಗಲಿ ಅವರಿಗೆ
ಮಹಾನುಭಾವ ಮುಕ್ತಿಯಕೊಡುವ
ನೆಲೆಯಾದಿ ಕೇಶವ

–ಕನಕದಾಸ

ಮುಖ ಪುಟದ ಛಾಯಾಚಿತ್ರ
–ಟಿ.ಎಸ್.ಸತ್ಯನ್

ವಿಚಾರ ದೀಪ್ತಿ

ನಾನು ಬಾಲಕನಾಗಿದ್ದಾಗ ಬರೋಡಾದಲ್ಲಿ ಮನೆಮನೆಗೆ ಹೋಗಿ ಪುಸ್ತಕಗಳ ಭಿಕ್ಷೆ ಕೇಳುತ್ತಿದ್ದೆ. ಯಾವುದೇ ಮನೆಯಿಂದ ಯಾವುದೇ ಪುಸ್ತಕ ಸಿಗಲಿ ಅದನ್ನು ತೆಗೆದುಕೊಳ್ಳುತ್ತಿದ್ದೆ. ಹೀಗೆ ಎರಡು - ಮೂರು ಸಾವಿರ ಪುಸ್ತಕಗಳು ದಾನವಾಗಿ ದೊರೆತವು. ಅವುಗಳನ್ನು ನಮ್ಮ ವಿದ್ಯಾರ್ಥಿ ಮಂಡಲಿಯಲ್ಲಿ ಸಂಗ್ರಹ ಮಾಡಿದೆವು. ಆ ಪುಸ್ತಕಗಳಲ್ಲಿ ಋಗ್ವೇದವೂ ಇತ್ತು. ನನ್ನ ತಾಯಿಯ ಮರಣ ೧೯೧೮ ರಲ್ಲಿ ಶರತ್ ಪೂರ್ಣಿಮೆಯ ನಾಲ್ಕು ದಿನಗಳ ನಂತರ ಚತುರ್ಥಿಯಂದು ಆಯಿತು. ಬ್ರಾಹ್ಮಣರ ಮೂಲಕ ಹಳೆ ಪದ್ಧತಿಗೆ ಅನುಸಾರವಾಗಿ ಅಂತ್ಯಕ್ರಿಯೆ ಮಾಡುವುದರಲ್ಲಿ ನನಗೆ ವಿಶ್ವಾಸವಿಲ್ಲ, ಅಂತಿಮ ಕ್ರಿಯೆಯನ್ನು ನಾನೇ ಮಾಡುವೆ ಎಂದು ಹೇಳಿದೆ. ಆದರೆ ಇದು ಯಾರಿಗೂ ಒಪ್ಪಿಗೆಯಾಗಲಿಲ್ಲ. ಆಗ ನಾನು ಸ್ಮಶಾನಕ್ಕೆ ಹೋಗಲಿಲ್ಲ. ಅದೇ ದಿನದಿಂದ ವೇದವನ್ನು ಓದಲು ಪ್ರಾರಂಭಿಸಿದೆ. ತಾಯಿಯ ಮರಣದ ದಿನವೇ ಋಗ್ವೇದದ ಆ ಪುಸ್ತಕವನ್ನು ನಾನು ಕೈಗೆತ್ತಿಕೊಂಡೆ. ಓರ್ವ ಮಾತೆ ನಿರ್ಗಮಿಸಿದಳು ಎರಡನೆ ಮಾತೆಯ ಆಶ್ರಯವನ್ನು ಪಡೆದೆ. ಆಗ ಋಗ್ವೇದವು ಹೆಚ್ಚು ಅರ್ಥವಾಗಲಿಲ್ಲ. ಏಕೆಂದರೆ ನನ್ನ ಅಧ್ಯಯನ ವೇದಮರ್ಮವನ್ನು ತಿಳಿಯುವಷ್ಟರ ಮಟ್ಟಿಗೆ ಇರಲಿಲ್ಲ. ನನ್ನ ಬುದ್ಧಿಯೂ ಕೂಡ ಅದನ್ನು ಗ್ರಹಿಸುವಷ್ಟು ಇರಲಿಲ್ಲ. ಆದರೂಕೂಡ ವೇದದ ಆಶ್ರಯವನ್ನು ಪಡೆದುದಕ್ಕೆ ಇಬ್ಬರು ವ್ಯಕ್ತಿಗಳು ಕಾರಣ. ಅವರಲ್ಲಿ ಒಬ್ಬರು, ಜ್ಞಾನೇಶ್ವರ ಮಹಾರಾಜ್‌ರವರು; ಎರಡನೆಯವರು, ಶಂಕರಾಚಾರ್ಯರು. ಇವರಿಬ್ಬರೂ ನನಗೆ ಅತ್ಯಂತ ಪೂಜ್ಯ ಪುರುಷರಾಗಿದ್ದಾರೆ.

- ವಿನೋಬಾ.

ಶಾಲೆಯೆಂಬಾ ಪಂಜರ ಸೇರಬಯಸದಾ ಹಕ್ಕಿಗಳು

-ಸುರೇಂದ್ರ ಕೌಲಗಿ.

ಆಧುನಿಕ ಯುಗದಲ್ಲಿ ಶಾಲೆಯೆಂಬ ಸಂಸ್ಥೆ ಬಹಳ ಪ್ರಧಾನ ಪಾತ್ರ ವಹಿಸುತ್ತಿದೆ. ಶಾಲೆ ಇಲ್ಲದ ಸಮಾಜವನ್ನು ಊಹಿಸುವುದು ಸಹ ಅಸಾಧ್ಯ. ಸಮಾಜದ ಏಳಿಗೆಗೂ, ಶಾಲೆಗೂ ಅವಿಚ್ಛಿನ್ನವಾದ ಸಂಬಂಧ ಉಂಟಾಗಿದೆ. ಆದ್ದರಿಂದ ಸಮಾಜದಲ್ಲಿರುವ ಎಲ್ಲ ತಿಳುವಳಿಕಸ್ಥರು ಮತ್ತು ತಂದೆ-ತಾಯಿಗಳು ಶಾಲೆಗೆ ಅತಿಯಾದ ಪ್ರಾಶಸ್ತ್ಯ ಕೊಟ್ಟಿದ್ದಾರೆ.

ಶಾಲೆಯ ಪ್ರಧಾನ ಕರ್ತವ್ಯ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದೆಂದು ನಾವು ತಿಳಿದಲ್ಲಿ ಶಾಲೆಯ ಆ ಕೆಲಸ ಮನೆಯಿಂದಲೇ ಪ್ರಾರಂಭವಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದಲೆ ಮಕ್ಕಳ ಮೊದಲ ಗುರು ತಾಯಿ ಮತ್ತು ಮೊದಲ ಶಾಲೆ ಮನೆ ಎಂಬ ಮಾತು ಬಳಕೆಗೆ ಬಂದಿದ್ದರೆ ಅದು ತಪ್ಪೇನಲ್ಲ. ಮಗು ಇನ್ನೂ ತೊಟ್ಟಿಲಲ್ಲಿದ್ದಾಗಲೆ ಆ ಮನೆಯ ಹಿರಿಯರು ಆ ಮಗುವಿನೊಂದಿಗೆ ಆಡುವ ಮಾತುಗಳು, ಪ್ರದರ್ಶಿಸುವ ಹಾವ-ಭಾವಗಳು ಆ ಮಗುವಿನ ಮೇಲೆ ಅತ್ಯಾಶ್ಚರ್ಯಕರ ರೀತಿಯಲ್ಲಿ ಪ್ರಭಾವ ಬೀರುತ್ತವೆ. ಮುಂದೆ ಆ ಪ್ರಭಾವವೇ ಮಗುವಿನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಮನೆ ಶಾಲೆಯಾಗುತ್ತದೆ ಮತ್ತು ಮನೆಯಲ್ಲಿನ ಜನರು ಅಧ್ಯಾಪಕರಾಗುತ್ತಾರೆ. ಮಗುವಿನ ದೈಹಿಕ ಬೆಳವಣಿಗೆಯಾದಂತೆಲ್ಲ ಅದರ ತಿಳುವಳಿಕೆಯ ಬೆಳವಣಿಗೆಯೂ ಆಗುತ್ತಾ ಹೊಗುತ್ತದೆ. ಆಗ ಮಗು ಮಲಗಿದ್ದ ತೊಟ್ಟಿಲು ಮಗುವಿಗೆ ಬಂಧನಸ್ವರೂಪವಾಗುತ್ತದೆ. ಮಗು ಆ ಬಂಧನದಿಂದ ಮುಕ್ತವಾಗಲು ಹೆಣಗಾಡುತ್ತದೆ. ಆಗ ಮನೆಯ ಜನ ಮಗುವಿನ ಆ ಪ್ರಯತ್ನಕ್ಕೆ ನೆರವಾಗದಿದ್ದಲ್ಲಿ ಮಗು ತನ್ನನ್ನು ಹೆತ್ತ ತಾಯಿಯ ಮೇಲೆಯೆ ಕೋಪಿಸಿಕೊಳ್ಳುತ್ತದೆ. ಪ್ರತಿಭಟನಾರೂಪದಲ್ಲಿ ಅಳುತ್ತದೆ. ತಂದೆಯ ಮಾತು ಮೀರುತ್ತದೆ. ಇಲ್ಲಿ ನಾವು ಎರಡು ಪ್ರಕಾರದ ವಿರುದ್ಧ ಪ್ರಯತ್ನಗಳ ತಿಕ್ಕಾಟವನ್ನು ಕಾಣುತ್ತೇವೆ. ಒಂದು, ಮಗು ಮುಕ್ತತೆಗಾಗಿ ನಡೆಸುತ್ತಿರುವ ಪ್ರಯತ್ನ, ಇನ್ನೊಂದು ಆ ಮುಕ್ತ ಪ್ರಯತ್ನಕ್ಕೆ ಕಡಿವಾಣ ಹಾಕಲು ಪ್ರಯತ್ನಿಸುವ ತಂದೆ-ತಾಯಿಗಳ ಯತ್ನ. ಈ ಎರಡೂ ಪ್ರಯತ್ನಗಳ ತಿಕ್ಕಾಟದಲ್ಲಿ ಯಾವ ಪ್ರಯತ್ನಕ್ಕೆ ಯಶಸ್ಸು ದೊರೆಯುತ್ತೆಂಬುದರ ಮೇಲೆ ಪುನಃ ಆ ಮಗುವಿನ ವ್ಯಕ್ತಿತ್ವವು ರೂಪುಗೊಳ್ಳುತ್ತದೆ. ಇಂಥದೆ ಒಂದು ಪರಿಸ್ಥಿತಿ ಇಂದಿನ ನಮ್ಮ ಶಾಲೆಗಳಲ್ಲಿರುವುದು ಕಂಡುಬರುತ್ತದೆ. ಶಾಲೆಗೆ ಹೋಗುವ ಮಕ್ಕಳು ಮುಕ್ತ ವಾತಾವರಣ ಬಯಸುತ್ತಿದ್ದರೆ, ಅಧ್ಯಾಪಕರು ಮತ್ತು ತಂದೆ-ತಾಯಿಗಳು ಆ ಮುಕ್ತ ವಾತಾವರಣವನ್ನು ಹರಣ ಮಾಡುವುದರಲ್ಲಿ ತೊಡಗಿರುತ್ತಾರೆ. ಆಗ ಶಾಲೆಯೆಂಬುದು ಮಕ್ಕಳಿಗೆ ಸಂತೋಷ ಮತ್ತು ಕ್ರಿಯಾಶೀಲತೆಯ ಅಭಿವ್ಯಕ್ತಿ ಸ್ಥಾನವಾಗದೆ ಪಂಜರವಾಗುತ್ತದೆ. ಹೇಗೆ ಪಂಜರದಲ್ಲಿಟ್ಟ ಪಕ್ಷಿಗಳು ಹರಡಬೇಕಾಗಿರುವ ತಮ್ಮ ರೆಕ್ಕೆಗಳನ್ನು ಮುಚ್ಚಿಟ್ಟುಕೊಂಡು ಕುಳಿತಿರುತ್ತವೊ ಹಾಗೆಯೇ ಮುಕ್ತ ವಾತಾವರಣವಿಲ್ಲದ ಶಾಲೆಗಳಲ್ಲಿ ಮಕ್ಕಳು ತಮ್ಮ ವಿಚಾರಶಕ್ತಿಯನ್ನು ಮತ್ತು ತಮ್ಮ ಕೈ ಕಾಲುಗಳನ್ನು ಕಟ್ಟಿಹಾಕಿಕೊಂಡು ಕುಳಿತಿರುತ್ತಾರೆ.

ಶಿಶುವಿಹಾರದಿಂದ ಪ್ರಾರಂಭವಾಗುವ ಈ ಪ್ರಕಾರದ ಶಾಲಾ ವ್ಯವಸ್ಥೆ, ವಿಶ್ವವಿದ್ಯಾನಿಲಯಗಳವರೆಗೂ ಹಬ್ಬಿರುತ್ತದೆಂಬುದೇ ನಮ್ಮ ದೇಶದ ದುರ್ದೈವದ ಸಂಗತಿ. ಆದ್ದರಿಂದ ನಮ್ಮ ದೇಶದ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯ, ಸಂಶೋಧನಾ ಸಂಸ್ಥೆ ಇತ್ಯಾದಿ ಶಿಕ್ಷಣ ಕ್ಷೇತ್ರಗಳಿಂದ ಹೊರಬರುತ್ತಿರುವ ವ್ಯಕ್ತಿಗಳು ನಮ್ಮ ದೇಶವನ್ನು ಕಟ್ಟುವುದರಲ್ಲಿ ವಿಫಲರಾಗಿದ್ದಾರೆ. ಈ ಸಮಸ್ಯೆಯನ್ನು ಅರಿತ ನಮ್ಮ ದೇಶದ ಸರ್ಕಾರಗಳು ಅನೇಕ ಆಯೋಗಗಳನ್ನು ರಚಿಸಿ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಲು ಪ್ರಯತ್ನಿಸಿವೆ. ಆದರೂ ಸಹ ಯಾವುದೇ ಬದಲಾವಣೆಯಾಗದೆ ಸ್ವಾತಂತ್ರ್ಯ ಪೂರ್ವದ ಶಿಕ್ಷಣ ಪದ್ಧತಿಯೆ ಮುಂದುವರಿಯುತ್ತಿದೆ. ಇದರ ಪರಿಣಾಮವಾಗಿ ನಮ್ಮ ದೇಶವು ವಿಶ್ವದ ಬಂಡವಾಳಶಾಹಿ ದೇಶಗಳ ದಾಸನಾಗಿದೆ. ಶಿಕ್ಷಣದಲ್ಲಿ ಮೂಲತಃ ಬೇಕಾದುದು ಅಭಿವ್ಯಕ್ತಿ ಸ್ವಾತಂತ್ರ್ಯ. ಈ ಸ್ವಾತಂತ್ರ್ಯವನ್ನು ನಿರಾಕರಿಸುವ ಶಿಕ್ಷಣ ಪದ್ಧತಿ ನಮ್ಮ ದೇಶದಲ್ಲಿ ಇರುವವರೆಗೂ ದೇಶ ನಿಜವಾದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಪಡೆಯಲಾರದು. ಶಿಕ್ಷಣದ ಸುಧಾರಣೆಯ ಹೆಸರಿನಲ್ಲಿ ಕೈ ಗೊಳ್ಳಲಾದ ಎಲ್ಲ ಕ್ರಮಗಳು ವಿದ್ಯಾರ್ಥಿಗಳ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಹರಣ ಮಾಡುವುದರಲ್ಲಿ ಯಶಸ್ವಿಯಾಗಿವೆಯೆ ಹೊರತು ಆ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಹಕ್ಕಿನ ರೂಪದಲ್ಲಿ ಕೊಡಲು ವಿಫಲವಾಗಿವೆ. ಆದ್ದರಿಂದ ನಮ್ಮ ದೇಶದ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ, ಸಂಶೋಧನಾ ಸಂಸ್ಥೆಗಳಲ್ಲಿ ಉಸಿರುಗಟ್ಟುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗೆಯ ಶಿಕ್ಷಣ ಕ್ಷೇತ್ರಗಳಿಂದ ಹೊರ ಬರುವ ಯುವಕರು ಅಂಧಕಾರದತ್ತ ಹೋಗುತ್ತಾರೆಯೆ ಹೊರತು ಪ್ರಕಾಶದತ್ತ ಹೋಗುವುದಿಲ್ಲ. ಶಿಕ್ಷಣ ಕ್ಷೇತ್ರದಲ್ಲಿಯ ಇಂಥ ದುರಂತಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಮೊಟ್ಟ ಮೊದಲನೆಯದು ಶಿಕ್ಷಣವನ್ನು ಒಂದು ವ್ಯಾಪಾರಿ ಸೊತ್ತನ್ನಾಗಿ ಮಾಡಿರುವುದು. ಯಾವಾಗ ಶಿಕ್ಷಣ ವ್ಯಾಪಾರದ ಸರಕಾಯಿತೊ ಆಗ ಶಿಕ್ಷಣ ಸಂಸ್ಥೆಗಳು ಕಾರ್ಖಾನೆಯಂತೆ ಕೆಲಸ ಮಾಡುವುದು ಅನಿವಾರ್ಯವಾಗುತ್ತದೆ. ಕೈಗಾರಿಕಾ ಕ್ರಾಂತಿಯ ವೇಳೆಯಲ್ಲಿ ಯಾವ ರೀತಿ ಕಾರ್ಮಿಕರ ಸ್ಥಿತಿ ಇತ್ತೊ ಅಂಥದೆ ಸ್ಥಿತಿ ಕಾರ್ಖಾನೆಗಳೆಂಬ ಇಂದಿನ ಶಿಕ್ಷಣ ಸಂಸ್ಥೆಗಳಲ್ಲಿಯ ವಿದ್ಯಾರ್ಥಿಗಳದಾಗಿದೆ. ಕೈಗಾರಿಕಾ ಕ್ರಾಂತಿಯ ಹೊಸತರಲ್ಲಿ ಕಾರ್ಮಿಕರು ೧೦–೧೨ ಗಂಟೆಗಳ ಕಾಲ ನಿರ್ಬಂಧಿತ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾಗಿತ್ತು. ಅದೇ ರೀತಿ ಇಂದಿನ ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ತಮ್ಮ ವಯಸ್ಸಿಗೆ ಮೀರಿದ ಶಕ್ತಿಗೂ ಮೀರಿದ ಪ್ರಮಾಣದಲ್ಲಿ ವಿದ್ಯಾಭ್ಯಾಸದಲ್ಲಿ ತೊಡಗಬೇಕಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳಿಗೆ ಸಹಜವಾಗಿ ದೊರೆಯಬೇಕಾದ ಕ್ರೀಡಾ ಅವಕಾಶಗಳು, ಸಾಂಸ್ಕೃತಿಕ ಅವಕಾಶಗಳು ತಪ್ಪಿ ಹೋಗಿ ಜೀವನದ ಬಗ್ಗೆ ಇರಬೇಕಾದ ಎಲ್ಲ ನವಿರಾದ ಭಾವನೆಗಳನ್ನು ಕಳೆದುಕೊಂಡಂಥವರಾಗುತ್ತಾರೆ.

ಶಾಲೆ ಅಥವಾ ಕಾಲೇಜುಗಳ ಪ್ರವೇಶ ಪರೀಕ್ಷೆಯ ಕಾರಣದಿಂದಾಗಿ ಶಾಲೆಯಲ್ಲಿರುವ ವಿದ್ಯಾರ್ಥಿಗಳೆಲ್ಲರೂ ಏಕ ಪ್ರಕಾರದ ವಸ್ತುಗಳಂತೆ ಕಾಣುತ್ತಾರೆ ಯಾವ ರೀತಿ ಬೆಲ್ಲದ ಅಚ್ಚುಗಳು ಕಬ್ಬಿನ ಆಲೆಮನೆಯಿಂದ ಹೊರ ಬಂದು ಒಂದೇ ಬಣ್ಣ ಒಂದೇ ರುಚಿ ಮತ್ತು ಒಂದೇ ರೂಪದ್ದಾಗಿ ಕಾಣುತ್ತವೊ ಅದೇ ರೀತಿ ಶಾಲೆ ಕಾಲೇಜುಗಳಲ್ಲಿರುವ

ವಿದ್ಯಾರ್ಥಿಗಳು ಕಾಣುತ್ತಾರೆ. ಸಮವಸ್ತ್ರಗಳನ್ನು ಧರಿಸಿದ ಮೇಲಂತೂ ವೈವಿಧ್ಯತೆಯೆಂಬುದೇ ಕಣ್ಮರೆಯಾಗುತ್ತದೆ. ಈ ಸ್ಥಿತಿ ಮುಂದೆ ಆಧುನಿಕ ಸಾಫ್ಟ್‌ವೇರ್ ಕೈಗಾರಿಕೆಗಳಲ್ಲಿಯೂ ಕಂಡುಬರುತ್ತದೆ. ಅಲ್ಲಿ ಕೆಲಸ ಮಾಡುವವರನ್ನು ನೋಡಿದಾಗ ಅವರೆಲ್ಲರೂ ಒಂದೇ ತಕ್ಕಡಿಯಲ್ಲಿ ಹಾಕಿ ತೂಗಿ ಅಳತೆಮಾಡಿಕೆಲಸಕ್ಕೆ ಸೇರಿಸಲ್ಪಟ್ಟವರಂತೆ ಕಾಣುತ್ತಾರೆ.

ಹೀಗೆ ಶಾಲೆಯಿಂದ ಪ್ರಾರಂಭವಾಗಿ ಆಧುನಿಕ ಕಾರ್ಖಾನೆಯವರೆಗೂ ಪಂಜರದ ಪರಿಸ್ಥಿತಿ ಇರುವುದು ನಮಗೆ ಸ್ಪಷ್ಟವಾಗಿ ಕಾಣುತ್ತದೆ. ಶಾಲೆ ಪಂಜರವಾಗಿರುವಂತೆ ಮಕ್ಕಳಿಗೆ ಅನುಭವಕ್ಕೆ ಬರುತ್ತಿರುವುದರಿಂದಲೇ ಪ್ರೌಢಶಿಕ್ಷಣವನ್ನು ಮುಗಿಸುವ ವೇಳೆಗೆ ವಿದ್ಯಾರ್ಥಿಗಳು ಶಾಲೆಯಿಂದ ಹೊರಬಂದು ಪುನಃ ನಿರಕ್ಷರಸ್ಥರಾಗುವ ಸ್ಥಿತಿಗೆ ಮುಟ್ಟಿರುತ್ತಾರೆ. ಶಾಲೆಗೆ ಆಗ ಮಕ್ಕಳನ್ನು ಹೇಗಾದರೂ ಮಾಡಿ ಆಕರ್ಷಿಸಬೇಕೆಂಬ ಪ್ರಯತ್ನ ಪ್ರಾರಂಭವಾಗುತ್ತದೆ. ಈ ಪ್ರಯತ್ನದ ಅಂಗವಾಗಿ ಮಕ್ಕಳ ಹಾಜರಾತಿಗೆ ಬಹುಮಾನ, ಬಿಸಿಯೂಟ ಕಾರ್ಯಕ್ರಮ, ಸಮವಸ್ತ್ರ ವಿತರಣೆ, ಪಡಿತರದ ಆಸೆ ತೋರಿಸುವಿಕೆ ಇತ್ಯಾದಿ ಪ್ರಯತ್ನಗಳೆಲ್ಲವೂ ನಡೆಯುತ್ತವೆ. ಈ ಎಲ್ಲ ಪ್ರಯತ್ನಗಳ ನಂತರವೂ ಸಮಾಜದ ಮಕ್ಕಳ ಬಹುದೊಡ್ಡ ಸಂಖ್ಯೆಯು ಶಾಲೆಯಹೊರಗೆ ಇದೆಯೆಂದು ಸಮೀಕ್ಷೆಯಿಂದ ಗೊತ್ತಾಗುತ್ತದೆ.

ಶೈಕ್ಷಣಿಕ ಕ್ಷೇತ್ರದಲ್ಲಿ ಇತ್ತೀಚಿಗಿನ ಬಹು ಮುಖ್ಯ ಬೆಳವಣಿಗೆ ಪರೀಕ್ಷೆಗೆ ಸಂಬಂಧಿಸಿದುದಾಗಿದೆ. ಶಾಲೆಯೆಂದರೆ ಒಂದು ಪಠ್ಯ ಕ್ರಮ, ಪಠ್ಯಕ್ರಮದ ಬೆನ್ನ ಹಿಂದೆಯೆ ಒಂದು ಪರಿಕ್ಷಾ ಪದ್ಧತಿ ಇವೆಲ್ಲ ಇರಲೇಬೇಕೆಂಬ ವಿಚಾರವನ್ನು ಬದಲಾಯಿಸುವ ದೊಡ್ಡ ಪ್ರಯೋಗ ಕುರಿತಾಗಿ ಚಿಂತನೆ ವಿಶ್ವದದ್ಯಾಂತ ನಡೆಯುತ್ತಿದೆ. ಇದಕ್ಕೆ ಕಾರಣ ಪರೀಕ್ಷೆಗೂ ವಿದ್ಯಾರ್ಥಿಗಳಿಗೂ ಮಧ್ಯೆ ಇರುವಂಥ ಒಂದು ಪ್ರಕಾರದ ದ್ವೇಷ ಭಾವನೆ. ಪರೀಕ್ಷೆಗಳಿಂದ ತಪ್ಪಿಸಿಕೊಳ್ಳುವ ಬಗೆ ಹೇಗೆಂಬುದು ವಿದ್ಯಾರ್ಥಿಗಳಿಗೆ ಗೊತ್ತಾಗದೆ ಅವರು ವಾಮಮಾರ್ಗಗಳನ್ನು ಹಿಡಿಯುವುದು ಅನಿವಾರ್ಯವಾಗುತ್ತದೆ. ಅವುಗಳಲ್ಲಿ ಕೆಲವು ಅರ್ಥವಿಲ್ಲದೆ ಕಂಠಪಾಠ ಮಾಡುವುದು, ಕದ್ದು ಬರೆಯುವುದು, ಪ್ರಭಾವ ಬೀರಿ ಅಂಕಗಳನ್ನು ಪಡೆಯುವುದು ಇತ್ಯಾದಿ. ಇದರಿಂದಾಗಿ ಪರಿಕ್ಷೆಗಳು ವಿದ್ಯಾರ್ಥಿಯ ನಿಜವಾದ ಸಾಮರ್ಥ್ಯವನ್ನು ಪ್ರಕಟಪಡಿಸಲಾರವೆಂದು ಸಿದ್ಧವಾಯಿತು. ಹಾಗಾಗಿ ಪರೀಕ್ಷಾ ಪದ್ಧತಿಯ ಹಿಂದಿರುವ ಮೂಲ ಆಶಯದ ಬಗ್ಗೆಯೆ ಪ್ರಶ್ನೆಗಳು ಏಳತೊಡಗಿದವು. ಪರೀಕ್ಷೆಗಳಿಂದ ವಿದ್ಯಾರ್ಥಿಗಳನ್ನು ಬಿಡುಗಡೆ ಮಾಡುವ ಬಗ್ಗೆ ಚಿಂತನೆ ಪ್ರಾರಂಭವಾಯಿತು. ಅದರ ಪರಿಣಾಮವಾಗಿ ಮಾಧ್ಯಮಿಕ ಏಳನೆಯ ತರಗತಿಯ ಸಾರ್ವಜನಿಕ ಪರೀಕ್ಷೆ ರದ್ದಾಗುವ ಮಟ್ಟಕ್ಕೆ ಈ ವಿಚಾರ ಬೆಳೆಯಿತು. ಇದಕ್ಕೂ ಮೊದಲು ಮುಕ್ತ ವಿಶ್ವವಿದ್ಯಾನಿಲಯದ ಕಲ್ಪನೆ ಮತ್ತು ಅಂಚೆ ಮೂಲಕ ಖಾಸಗಿ ಶಿಕ್ಷಣ ಮುಂತಾದವುಗಳು ನಡೆದೆ ಇದ್ದವು. ಇವುಗಳೆಲ್ಲವನ್ನು ಬಲಪಡಿಸುವ ನಿಟ್ಟಿನಲ್ಲಿ ಶೈಕ್ಷಣಿಕ ಉಪಗ್ರಹವನ್ನು (ಎಜುಸ್ಯಾಟ್) ಹಾರಿಬಿಡಲಾಗಿದೆ. ಇನ್ನು ಮುಂದೆ ಈ ಉಪಗ್ರಹದ ಮೂಲಕ ವಿದ್ಯಾರ್ಥಿಗಳಿಗೆ ಬೋಧಿಸಲಾಗುವುದು. ಆಗ ಪರೀಕ್ಷಾ ಸ್ವರೂಪವೆ ಬದಲಾಗುವುದು. ಹೀಗೆ ಪರೀಕ್ಷೆಗಳಿಲ್ಲದ ವಿದ್ಯಾಭ್ಯಾಸ ಕ್ರಮ ರೂಪುಗೊಳ್ಳುತ್ತಿರುವುದು ಶಾಲೆಗಳು ಹೇಗೆ ವಿದ್ಯಾರ್ಥಿಗಳಿಗೆ ಪಂಜರ ಸ್ವರೂಪದ್ದಾಗಿವೆಂಬುದಕ್ಕೆ ಸಾಕ್ಷಿಯಾಗಿವೆ.

ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಲಿಯೂ ಸಹ (CBSE) ಪರೀಕ್ಷೆಗಳನ್ನು ತೆಗೆದುಹಾಕುವ ಬಗ್ಗೆ ತೀವ್ರವಾಗಿ ಆಲೋಚಿಸುತ್ತಿದೆ. ಕೇಂದ್ರೀಯ ಶಿಕ್ಷಣ ಮಂಡಲಿಯ ಅಧೀನಕ್ಕೆ ಬರುವ ಶಾಲೆಗಳೆಲ್ಲವೂ ಹೆಚ್ಚಾಗಿ ಶ್ರೀಮಂತ ವರ್ಗದ ವಿದ್ಯಾರ್ಥಿಗಳಿಗೆ ಸೀಮಿತವಾಗಿವೆ. ಮಂಡಲಿಯ ಈಗಿನ ಪರೀಕ್ಷಾ ಪದ್ಧತಿ ಹಳೆಯ ಮತ್ತು ಪಾರಂಪರಿಕ ರೀತಿಯದೂ ಆಗಿದೆ. ಈ ಪರೀಕ್ಷಾ ಪದ್ಧತಿ ವಿದ್ಯಾರ್ಥಿಗಳಲ್ಲಿರುವ ಜ್ಞಾನವನ್ನು ಬಹಿರಂಗಗೊಳಿಸುವುದಕ್ಕಿಂತ ಅವನಲ್ಲಿರುವ ಅಜ್ಞಾನವನ್ನು ಬಹಿರಂಗಗೊಳಿಸುತ್ತದೆ. ಆದ್ದರಿಂದ ೮ ನೇ ತರಗತಿಯವರೆಗೆ ವಾರ್ಷಿಕ ಪರೀಕ್ಷೆಯನ್ನು ನಡೆಸದೆ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅಳೆಯಲಾಗುವುದೆಂದು ಹೇಳಲಾಗುತ್ತಿದೆ. ಇದರಿಂದ ಅಂಥ ಪ್ರಯೋಜನವೇನೂ ಆಗಲಾರದು. ಶಾಲೆಯ ಕೊನೆಯ ಹಂತದಲ್ಲಿಯ ಪರೀಕ್ಷೆಯನ್ನು ರದ್ದುಪಡಿಸಿದಾಗಲೆ ಈ ಎಲ್ಲ ಪ್ರಯತ್ನಗಳ ಸಾರ್ಥಕ್ಯ ಕಂಡುಬರುತ್ತದೆ.

ಹೀಗೆ ಪರೀಕ್ಷಾ ಕ್ರಮವೆ ಡೋಲಾಯಮಾನವಾದ ಪರಿಸ್ಥಿತಿಯಲ್ಲಿರುವಾಗ ಶಾಲೆಗಳಲ್ಲಿರುವ ಶಿಕ್ಷಣ ಹೇಗಿರಬೇಕೆಂಬುದರ ಬಗ್ಗೆ ಹೊಸದಾಗಿಯೆ ಆಲೋಚನೆ ಮಾಡಬೇಕಾಗುತ್ತದೆ. ಆಗ ಶಾಲಾ ಶಿಕ್ಷಣ ಈಗ ಇರುವಂತೆ ಮುಂದುವರಿಯಲು ಸಾಧ್ಯವೇ ಇಲ್ಲ. ಭವಿಷ್ಯದ ಶಿಕ್ಷಣ ನಿಜವಾದ ಅರ್ಥದಲ್ಲಿ ಜೀವನ್ಮುಖಿ ಶಿಕ್ಷಣವಾಗಿರಬೇಕಾಗುತ್ತದೆ. ಅಂದರೆ ಜೀವನಕ್ಕೆ ಉಪಯೋಗವಾಗುವ, ಜೀವನದಲ್ಲಿ ಚೈತನ್ಯವನ್ನು ಉಳಿಸುವ, ವಿದ್ಯಾರ್ಥಿಗಳಲ್ಲಿರುವ ಪುರುಷಾರ್ಥಗಳನ್ನು ಹೊರಗೆಡುಹುವ ಶಿಕ್ಷಣ ಪದ್ಧತಿ ರೂಪಿತವಾಗಬೇಕಾಗುತ್ತದೆ. ಶಾಲೆಗಳು ಈಗಿನಂತೆ ಪಂಜರದ ಸ್ವರೂಪದ್ದಾಗಿರದೆ ಅತ್ಯಂತ ಮುಕ್ತವಾದ ಮತ್ತು ವಿಶಾಲವಾದ ಚೌಕಟ್ಟಿನಲ್ಲಿ ನಡೆಯಬೇಕಾದಂಥ ಶಿಕ್ಷಣ ಪದ್ಧತಿಯ ಆಧಾರದ ಮೇಲೆ ರೂಪಿತಗೊಳ್ಳಬೇಕಾಗುತ್ತದೆ. ಅದೃಷ್ಟವಶಾತ್ ಇಂಥ ಶಿಕ್ಷಣ ಕುರಿತಾದ ಅನೇಕ ಉಪಯುಕ್ತ ಸಾಹಿತ್ಯ ಹೊರಬರುತ್ತಿದೆ ಮತ್ತು ದೇಶದ ವಿವಿಧ ಭಾಗಗಳಲ್ಲಿ ಅನೇಕ ಸಾಹಸಿ ವಿದ್ಯಾಪ್ರೇಮಿಗಳು ಈ ಹೊಸ ಬಗೆಯ ಶಿಕ್ಷಣದ ಪ್ರಯೋಗಗಳನ್ನು ಮಾಡುತ್ತಿದ್ದಾರೆ ಮತ್ತು ಯಶಸ್ಸನ್ನು ಪಡೆಯುತ್ತಿದ್ದಾರೆ.

ನಮ್ಮ ದೇಶದ ಭವಿಷ್ಯ ಉಜ್ವಲವಾಗಬೇಕಾದರೆ ಎಲ್ಲ ಪ್ರಕಾರದ ಕಟ್ಟುಪಾಡುಗಳಿಂದ ಬಿಡುಗಡೆ ಹೊಂದಿದ, ಯಾವುದೇ ಪ್ರಕಾರದ ಪಟ್ಟಭದ್ರ ಹಿತಾಸಕ್ತಿಗಳಿಗೆ ಸಿಲುಕದ, ವಿದ್ಯಾರ್ಥಿಗಳನ್ನು ತನ್ನೆಡೆಗೆ ಸಹಜವಾಗಿ ಆಕರ್ಷಿಸುವ ವಿದ್ಯಾಭ್ಯಾಸ ಕ್ರಮ ಆದಷ್ಟು ಬೇಗ ಜಾರಿಗೆ ಬರಬೇಕಾದುದು ಅಗತ್ಯವಾಗಿದೆ. ಈ ಹೊಸ ರೀತಿಯ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಂಡಾಗ ಶಿಕ್ಷಣ ಮಾಧ್ಯಮದ ಸಮಸ್ಯೆ ಬಗೆಹರಿಯುತ್ತದೆ ಮತ್ತು ನಿರುದ್ಯೋಗ ಸಮಸ್ಯೆಗೂ ಪರಿಹಾರ ಸಿಗುತ್ತದೆ. ಇಂಥ ನೂತನ ಶಿಕ್ಷಣದ ವಿಚಾರದತ್ತ ಮಕ್ಕಳ ದಿನಾಚರಣೆಯ ತಿಂಗಳಾದ ಈ ನವೆಂಬರ್ ಮಾಹೆಯಲ್ಲಿ ಎಲ್ಲ ಶಿಕ್ಷಣಾಭಿಮಾನಿಗಳು ಚಿಂತನೆ ಮಾಡುವಂತಾಗಲಿ.

ಚೀನಾದ ಕ್ರಾಂತಿಕಾರಿ : ಡೆಂಗ್ ಜಿಯೋಪಿಂಗ್, ಒಂದು ಸ್ಮರಣೆ

ಲೆ-ರವೀಂದ್ರ ಶರ್ಮ

(೨೦೦೪ ಅಕ್ಟೋಬರ್ ೧ ಚೀನಾದ ಐತಿಹಾಸಿಕ ಕ್ರಾಂತಿಯ ೫೫ನೆ ವರ್ಷ. ಈ ವರ್ಷದ ಆಗಸ್ಟ್ ೨೨ ರಂದು ಚೀನಾದ ಕ್ರಾಂತಿಕಾರಿ ಡೆಂಗ್‌ರವರ ಜನ್ಮಶತಮಾನೋತ್ಸವವೂ ಸಹ. ಅವರ ಸ್ಮರಣಾರ್ಥ ಈ ಲೇಖನ.)

ಚೀನಾದ ಸೈಚುನ್ ಪ್ರಾಂತದಲ್ಲಿ ಡೆಂಗ್ ೧೯೦೪ ಆಗಸ್ಟ್ ೨೨ರಂದು ಜನ್ಮವೆತ್ತಿದರು. ಡೆಂಗ್ ಜಿಯೋಪಿಂಗ್ ಫ್ರಾನ್ಸ್‌ನಲ್ಲಿ ವಿದ್ಯಾಭ್ಯಾಸ ಮಾಡಿದರು. ಮೇ ೪ರ ಕ್ರಾಂತಿಯ ಪ್ರಭಾವ ಅವರ ಮೇಲುಂಟಾಗಿತ್ತು. ಕ್ರಾಂತಿಯ ಆ ಇಡೀ ಅವಧಿಯಲ್ಲಿ ಚೀನಾದ ಕಮ್ಯೂನಿಸ್ಟ್ ನೀತಿನಿರ್ಧಾರಕರ ಅತ್ಯಂತ ಪ್ರಮುಖ ನಾಯಕರಾಗಲು ಡೆಂಗ್ ಬಹಳ ಹೋರಾಟ ನಡೆಸಿದರು. ಆದರೆ ಡೇಂಗ್ ಯಾವಾಗಲೂ ಮಾವೋ ಜೌ ಮತ್ತು ಲ್ಯೂ ಸೌಕಿ ಅವರಿಗಿಂತ ಹಿಂದೆಯೇ ಉಳಿಯುತ್ತಿದ್ದರು. ಡೆಂಗ್ ಲ್ಯೂಸೌಕಿ ರವರ ಬಹಳ ದೊಡ್ಡ ಬೆಂಬಲಿಗರಾಗಿದ್ದರು ಮತ್ತು ಮಾವೋ ಓರ್ವ ಚಿಕ್ಕ ಬುರುಗ್ವಾ ಕ್ರಾಂತಿಕಾರಿಯೆಂದು ಆಪಾದಿಸಿದ್ದರು. ಚೀನಾ ರಾಜಕಾರಣದಲ್ಲಿ ಡೆಂಗ್ ಓರ್ವ ಪ್ರತಿಭಾನ್ವಿತ ಪಾತ್ರಧಾರಿಯಾಗಿದ್ದರು. ಮಾವೋ ಮತ್ತು ಜೌ ದೈಹಿಕವಾಗಿ ತಮ್ಮ ಬಲವನ್ನು ಕಳೆದುಕೊಳ್ಳುತ್ತಿರುವಾಗ ಡೆಂಗ್ ಜೌರ ಕೃಪಾಕಟಾಕ್ಷಕ್ಕೆ ಒಳಗಾದರು ಮತ್ತು ೧೯೭೫ ರಲ್ಲಿ ಸಮಾವೇಶಗೊಂಡಿದ್ದ ನಾಲ್ಕನೇಯ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನಲ್ಲಿ, ಆಧುನೀಕರಣಕ್ಕಾಗಿ ನಾಲ್ಕು ಅಂಶಗಳ ಒಂದು ಠರಾವನ್ನು ಅಂಗೀಕರಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು. ಈ ಕಾರಣದಿಂದಾಗಿ ಡೆಂಗ್ ಚೀನಾದ ರಾಜಕೀಯ ಮತ್ತು ಸಾಮಾಜಿಕ ದಿಕ್ಕನ್ನೇ ಬದಲಾಯಿಸಿದರು. ಆ ಸಮಯದಲ್ಲಿ ಒಂದುಕಡೆಗೆ ಲಿನ್ ಬಿಯಾವೋ, ಇನ್ನೊಂದೆಡೆ ಗ್ಯಾಂಗ್ ಆಫ್ ಫೋರ್ ಇವರೊಂದಿಗೆ ಡೆಂಗ್ ಹಿಂಸಾಯುತ ಅಧಿಕಾರದ ಹೋರಾಟ ನಡೆಸಬೇಕಾಯಿತು. ಸಾಂಸ್ಕೃತಿಕ ಕ್ರಾಂತಿಯ ಕೋಲಾಹಲದ ಸಮಯದಲ್ಲಿ ಡೆಂಗ್ ಅಜೇಯವಾದ ಇಚ್ಛಾಶಕ್ತಿಯನ್ನು ಚೀನಾದ ನಾಯಕರಾಗಲು ಬೆಳೆಸಿಕೊಂಡರು. ಮಾವೋರ ನಿರ್ಗಮನದ ನಂತರ ನಾಯಕತ್ವವನ್ನು ವಹಿಸಲು ಇಚ್ಛಾಶಕ್ತಿ ಮತ್ತು ಕುಶಲತೆ ಇದ್ದಲ್ಲಿ ಹೇಗೆ ಅದನ್ನು ಅದ್ಭುತವಾದ ದಕ್ಷತೆಯಿಂದ ಸಾಧಿಸಬಹುದೆಂದು ಡೆಂಗ್ ತೋರಿಸಿಕೊಟ್ಟರು. ೮೦ ರ ದಶಕಗಳಲ್ಲಿ ಗೋರ್ಬಚೆವ್ ಸೋವಿಯೆತ್ ರಷ್ಯಾದಲ್ಲಿ ಆರ್ಥಿಕ ಸುಧಾರಣೆಗಳನ್ನು ಮಾಡಿದರೆಂಬುದನ್ನು ಸಾಮಾಜಿಕ ವಿಜ್ಞಾನಿಗಳು ಗುರುತಿಸುತ್ತಾರೆ. ಆದರೆ ಇದಕ್ಕೆ ಮೊದಲೇ ೭೦ ರ ದಶಕಗಳ ಕೊನೆಯ ಭಾಗದಲ್ಲಿಯೇ ಡೆಂಗ್ ಚೀನಾದಲ್ಲಿ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದಿದ್ದರೆಂಬುದನ್ನು ಯಾರೂ

ಗಮನಿಸಿಯೇ ಇಲ್ಲ! ಜಡ ಅರ್ಥವ್ಯವಸ್ಥೆಯ ಪರಿಣಾಮವನ್ನು ಕಲ್ಪಿಸಿಕೊಂಡಿದ್ದ ಕಮ್ಯೂನಿಸ್ಟ್ ವಲಯದಲ್ಲಿ ಡೆಂಗ್ ಮೊಟ್ಟಮೊದಲನೆ ನಾಯಕರಾಗಿದ್ದರು. ಹುಆ, ಗುಫಾಂಗ್, ವೂಲೆಸಾ ಮುಂತಾದವರನ್ನು ಬದಿಗೊತ್ತಲು ಡೆಂಗ್ ಹೋರಾಡುತ್ತಿದ್ದಾಗ ಓರ್ವ ಕಾರ್ಮಿಕ ನಾಯಕ ಪೋಲೆಂಡ್‌ನಲ್ಲಿ ಕಮ್ಯೂನಿಸ್ಟ್ ಪಕ್ಷದ ಆಡಳಿತವನ್ನು ಪದಚ್ಯುತಗೊಳಿಸಿದ್ದ ಡೆಂಗ್‌ರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಚೀನಾದ ಕಮ್ಯೂನಿಸ್ಟ್ ಪಕ್ಷವು ಅಧಿಕಾರದ ಗದ್ದುಗೆಯ ಮೇಲೆ ಇನ್ನೂ ಕುಳಿತ್ತಿದ್ದರೆ ಮತ್ತು ೧೧೩ ಕೋಟಿ ಜನರು ಆ ಪಕ್ಷದ ಹಿಡಿತದಲ್ಲಿದ್ದರೆ ಆ ಶ್ರೇಯಸ್ಸು ಡೆಂಗ್‌ಗೆ ಮಾತ್ರ ಸಲ್ಲುತ್ತದೆ. ಡೆಂಗ್ ಓರ್ವ ಸಾಮಾಜಿಕ ಪರಿವರ್ತಕ ಮತ್ತು ಸುಧಾರಕ. ಚೀನಾದ ಕಮ್ಯೂನಿಸ್ಟ್ ಪಕ್ಷವು ಗ್ಲಾಸೋನಾಸ್ಟಿನ್ ಪ್ರಭಾವಕ್ಕೆ ಒಳಗಾಗದಂತೆಯೂ ಮತ್ತು ಅದು ಚೀನಾದಲ್ಲಿ ಪಸರಿಸದಂತೆಯೂ ಡೇಂಗ್ ಕ್ರಮ ಕೈಗೊಂಡರು.

ಡೆಂಗ್‌ರ ಮಾವೋ ಯುಗದ ದೋಷಗಳ ವಾರಸುದಾರರಾಗಿದ್ದರೂ ಸಹ ಡೆಂಗ್ ಸೂಚಿಸಿದ್ದ ಉಪಾಯಗಳು ಚೀನಾದೇಶವನ್ನು ಬೇರೆ ದಿಕ್ಕಿನತ್ತ ತೆಗೆದುಕೊಂಡು ಹೋದವು. ಸಮಾಜವಾದದ ಬಗ್ಗೆ ಡೆಂಗ್‌ರ ತಿಳುವಳಿಕೆ ಮತ್ತು ಅವರು ಹೊಂದಿದ್ದ ಸೂಕ್ಷ್ಮಭೇದಗಳು ಚೀನಾದ ಒಳಗೆ ಮತ್ತು ಹೊರಗೆ ಗಂಭೀರವಾದ ವಿವಾದಕ್ಕೆ ಕಾರಣವಾದವು. ಸಮಾಜವಾದದೊಂದಿಗೆ ಖಾಸಗೀಕರಣವನ್ನು ಹೊಂದಿಸಿಕೊಳ್ಳಬಹುದೆಂದು ಡೆಂಗ್ ಬಹಿರಂಗವಾಗಿಯೇ ವಾದಿಸಿದರು. ಆದರೆ ನಿಜಾಂಶವೇನೆಂದರೆ ಸಮಾಜವಾದವು ಖಾಸಗೀಕರಣಕ್ಕೆ ವಿರುದ್ಧವಾದ ಸಿದ್ಧಾಂತ. ಖಾಸಗೀಕರಣದ ಬಗ್ಗೆ ಡೆಂಗ್‌ರಲ್ಲಿದ್ದ ಸಹಾನುಭೂತಿ ಚೀನಾದಲ್ಲಿ ವಿರೋಧಿಗಳ ಒಂದು ಸಣ್ಣ ಸಮೂಹವನ್ನು ಉಂಟುಮಾಡಿತಾದರೂ ಅವರ ಆಧುನಿಕತೆಯ ನಾಲ್ಕು ಅಂಶಗಳ ಕಾರ್ಯಕ್ರಮ ಚೀನಾ ಸಮಾಜದಲ್ಲಿ ನೆಮ್ಮದಿಯ ಮಧ್ಯಮ ವರ್ಗವೊಂದನ್ನು ಸೃಷ್ಟಿಸಿತು. ಡೆಂಗ್‌ರ ಯುಗದಲ್ಲಿ ಚೀನಾದ ಕಮ್ಯೂನಿಸ್ಟ್ ಪಕ್ಷ ದಿನೇ ದಿನೇ ಸಿದ್ಧಾಂತ ರಹಿತ ಪಕ್ಷವಾಗುತ್ತಾ ಹೋಯಿತು. ತಮ್ಮ ಕೊನೆಯ ಉಸಿರಿನವರೆಗೂ ಡೆಂಗ್ ಲೆನಿನ್‌ವಾದಿಯ ಕಠೋರ ವ್ಯಕ್ತಿತ್ವವನ್ನೇ ಉಳಿಸಿಕೊಂಡಿದ್ದರು. ಆದರೆ ಟಿಯಾನ್‌ಮೆನ್ ಚೌಕದಲ್ಲಿ ಪ್ರಜಾಪ್ರಭುತ್ವ ಚಳುವಳಿಯಲ್ಲಿ ತೊಡಗಿದ್ದ ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಬೇಕೆಂದು ತೆಗೆದುಕೊಂಡ ಅವರ ತೀರ್ಮಾನವು ಡೆಂಗ್‌ರ ಸಾಮ್ಯವಾದಿ ಸ್ವರೂಪವನ್ನು ಕಳಂಕಿಸಿತು. ಆರ್ಥಿಕ ಕ್ಷೇತ್ರದಲ್ಲಿ ಬಲಪಂಥೀಯ ನೀತಿಗಳನ್ನು ಅನುಸರಿಸುತ್ತಾ ಹೋದದ್ದರಿಂದ ಡೆಂಗ್‌ರ ಸಮಾಜವಾದಿ ಗುಣಲಕ್ಷಣ ದಿನಕಳೆದಂತೆ ವೈರುಧ್ಯಮಯವಾಗುತ್ತಾ ಬಂತು. ಡೆಂಗ್‌ರ ಕರಿಬೆಕ್ಕೇ ಅಥವಾ ಬಿಳಿಬೆಕ್ಕೇ ಎಂಬ ಘೋಷಣೆ ಪ್ರಪಂಚದಾದ್ಯಂತ ವಿವಾದಕ್ಕೆ ಗ್ರಾಸವಾಯಿತು, ಮತ್ತು ಅವರ ಜೊತೆಗಾರರಿಂದಾದ ಅಧಿಕಾರದ ದುರುಪಯೋಗವು ಚೀನಾ ಅಧ್ಯಯನ ಕುರಿತಾಗಿ ನಡೆದ ಪ್ರತಿಯೊಂದು ವಿಚಾರಗೋಷ್ಠಿಯಲ್ಲಿ ಚರ್ಚಿತವಾಯಿತು. ಟಿಯಾನ್‌ಮೆನ್ ಘಟನೆಯ ನಂತರ ಚೀನಾ ಕಮ್ಯೂನಿಸ್ಟ್ ಪಕ್ಷ ಮತ್ತು ಚೀನಾದ ಸಮಾಜದಲ್ಲಿ ಡೆಂಗ್‌ರ

ಜನಪ್ರಿಯತೆ, ಅಧಿಕಾರ ಮತ್ತು ಘನತೆ ಕ್ಷೀಣಿಸುತ್ತಾ ಬಂತು. ಆದಾಗ್ಯೂ ಚೀನಾದ ಅರ್ಥ ವ್ಯವಸ್ಥೆಯಲ್ಲಿ ಉಂಟಾದ ಶೇ ೯ ರಷ್ಟರ ಆರ್ಥಿಕ ಬೆಳವಣಿಗೆ ಹಾಗೂ ಬಡತನ ನಿರ್ಮೂಲನಾ ಕಾರ್ಯಕ್ರಮ ಮತ್ತು ಡೆಂಗ್‌ರ ಹಿತೈಷಿಗಳು ಹಾಗೂ ನಿಕಟವರ್ತಿಗಳು ಡೇಂಗರ ಆತ್ಮ ಸ್ಥೈರ್ಯವನ್ನು ಯಾವಾಗಲೂ ಉನ್ನತವಾಗಿರಿಸಿದರು. ಎಲ್ಲಿಯವರೆಗೆ ರೈತಸಮುದಾಯದ ಬಹುಸಂಖ್ಯಾತರು ಸುಖದಿಂದಿರುತ್ತಾರೋ ಅಲ್ಲಿಯವರೆಗೆ ಚೀನಾದ ಕಮ್ಯುನಿಸ್ಟ್ ಪಕ್ಷ ಅಧಿಕಾರದಲ್ಲಿ ಉಳಿಯುವುದೆಂದು ಡೆಂಗ್ ಮನಸಾರೆ ಒಪ್ಪಿಕೊಂಡಿದ್ದರು. ಒಂದು ಅರ್ಥದಲ್ಲಿ ಮಾವೋ ಸಿದ್ಧಾಂತಕ್ಕೆ ಡೆಂಗ್ ವಿರೋಧವಾಗಿದ್ದಾರೆಂದು ಕಂಡು ಬರುತ್ತದೆ. ಆದರೆ ಸಮಾಜವಾದಿ ಸಮಾಜದಲ್ಲಿ ಬುದ್ಧಿ ಜೀವಿಗಳ ಪಾತ್ರವನ್ನು ಕುರಿತು ಆಲೋಚಿಸಿದಾಗ ಮಾವೋ ಮತ್ತು ಡೆಂಗ್ ಇಬ್ಬರೂ ಏಕಮತವುಳ್ಳವರಾಗಿದ್ದರೆಂದು ಕಾಣುತ್ತದೆ. ಬಲಪಂಥೀಯರ ವಿರುದ್ಧದ ಚಳುವಳಿಯ ಕಾಲದಲ್ಲಿ ಮತ್ತು ಸಾಂಸ್ಕೃತಿಕ ಕ್ರಾಂತಿಯ ಕಾಲದಲ್ಲಿ ಚೀನಾದ ಬುದ್ಧಿಜೀವಿಗಳನ್ನು ಡೆಂಗ್ ತೆಗೆದುಹಾಕಿದರು. ಮತ್ತು ಹಿಂಸಿಸಿದರು. ಹಾಗೆಯೇ ಪ್ರಜಾಪ್ರಭುತ್ವಕ್ಕಾಗಿ ನಡೆದ ಚಳುವಳಿಯ ಕಾಲದಲ್ಲಿ ಬುದ್ಧಿಜೀವಿಗಳನ್ನು ಬಂಧಿಸಿದರು. ತಾವು ಪ್ರತಿಪಾದಿಸಿದ್ದ ನಾಲ್ಕು ಮೂಲಭೂತ ತತ್ವಗಳ ಸಾರವನ್ನು ಗ್ರಹಿಸುವಂತೆ ಆಜ್ಞಾಪಿಸಿದರು. ಅಮೇರಿಕಾದ ಆಡಳಿತವು ಚೀನಾದಲ್ಲಿಯ ಮಾನವ ಹಕ್ಕುಗಳ ಸಂಬಂಧದ ವಿಷಯವಾಗಿ ತಂದಿದ್ದ ಎಲ್ಲಾ ಬಗೆಯ ಒತ್ತಡಗಳನ್ನು ಡೆಂಗ್ ಪ್ರತಿಭಟಿಸಿ ಅವುಗಳಿಗೆ ಸೋಲದಂತೆ ತಮ್ಮನ್ನು ರಕ್ಷಿಸಿಕೊಂಡರು. ಮತ್ತು ರಷ್ಯಾದ ಕುಸಿತದ ನಂತರದ ಜಾಗತಿಕ ರಾಜಕಾರಣವನ್ನು ಗಂಭೀರತೆಯಿಂದ ಗಮನಿಸಿದರು. ಗೋರ್ಬಚೆವ್‌ರ ಬಗ್ಗೆ ಡೆಂಗ್ ಒಳ್ಳೆಯ ಅಭಿಪ್ರಾಯವನ್ನು ಹೊಂದಿರಲಿಲ್ಲ. ಆದರೆ ರಷ್ಯಾ ಒಕ್ಕೂಟ ಕುಸಿದುದರ ಬಗ್ಗೆ ಡೆಂಗ್ ವ್ಯಕ್ತಿಶಃ ಚಿಂತಾಕ್ರಾಂತರಾದರು ಮತ್ತು ಆ ಬಗ್ಗೆ ದುಃಖಿತರಾದರು. ಡೆಂಗ್‌ರವರ ಕಾಲದಲ್ಲಿ ಭಾರತ ಮತ್ತು ಚೀನಾದ ಮಧ್ಯೆಇರುವ ಗಡಿವಿವಾದದ ಬಗ್ಗೆ ಮಾತುಕತೆ ಮುಂದುವರಿಯಿತು. ವರ್ಷದಿಂದ ವರ್ಷಕ್ಕೆ ಸಾಂಸ್ಕೃತಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಸಹಕಾರ ಬೆಳೆಯುತ್ತಾ ಬಂತು. ಆದರೆ ಇದೇ ಸಮಯಕ್ಕೆ ಚೀನಾ ಪಾಕಿಸ್ತಾನವನ್ನು ತನ್ನ ಸರ್ವಕಾಲೀನ ಸ್ನೇಹಿತನೆಂದು ಭಾವಿಸಿತ್ತು. ಮೂರನೇ ವಿಶ್ವದ ದೇಶಗಳೊಂದಿಗೆ ಸೌಹಾರ್ದತೆಯನ್ನು ಉಳಿಸಿಕೊಂಡು ಬರಲು ಡೆಂಗ್ ಮರೆಯಲಿಲ್ಲ. ಡೆಂಗ್‌ರ ಆಡಳಿತ ಕಾಲದಲ್ಲಿ ಆಲ್‌ಕೈದಾದ ಕೆಲವು ಸದಸ್ಯರು ಚೈನಾದ ಕಮ್ಯುನಿಸ್ಟ್ ಪಕ್ಷದೊಂದಿಗೆ ಸಂಬಂಧ ಇಟ್ಟುಕೊಂಡಿದ್ದರೆಂಬುದಾಗಿ ಪ್ರತೀತಿ ಇದೆ. ಆದಾಗ್ಯೂ ಡೆಂಗ್ ಚೀನಾದ ಜಿನ್‌ಜಿಯಾಂಗ್ ಪ್ರಾಂತ್ಯದಲ್ಲಿಯ ಮುಸ್ಲಿಂ ಮೂಲಭೂತವಾದಿಗಳೊಂದಿಗೆ ಕಠೋರವಾಗಿಯೇ ವರ್ತಿಸಿದರು. ಸದ್ದಾಂಹುಸೇನ್‌ನೊಂದಿಗೆ ಡೆಂಗ್ ಒಳ್ಳೆಯ ಸಂಬಂಧವನ್ನು ಹೊಂದಿದ್ದರೆಂದು ಸಹ ಪ್ರತೀತಿ ಇದೆ. ವಿಯೆಟ್ನಾಂಗೆ ಕಠೋರ ಪಾಠವೊಂದನ್ನು ಕಲಿಸಬೇಕೆಂದು ಡೆಂಗ್ ಬಯಸಿದ್ದರೂ ಕೂಡ ಚೀನಾದ ಆಂತರಿಕ ವ್ಯವಹಾರಗಳಲ್ಲಿ ಪ್ರವೇಶ ಮಾಡಲು

ಅಮೇರಿಕಾದ ಆಡಳಿತಕ್ಕೆ ಅವರು ಎಂದೂ ಅವಕಾಶ ಕೊಡಲಿಲ್ಲ. ಉದಾಹರಣೆಗೆ ಅದು ತೈವಾನ್ ಮತ್ತು ಟಿಬೆಟ್‌ಗೆ ಸಂಬಂಧಿಸಿದಂಥ ವಿಷಯವೇ ಆಗಿರಬಹುದು. ಹಾಂಗ್‌ಕಾಂಗ್ ಚೀನಾದ ಭಾಗವಾಗುವುದನ್ನು ನೋಡುವಂತಹ ಅವಕಾಶ ಡೆಂಗ್‌ಗೆ ದೊರೆಯದೇ ಇದ್ದದ್ದು ಖೇದಕರ ಸಂಗತಿ. ಹಾಂಗ್‌ಕಾಂಗ್ ಚೀನಾಕ್ಕೆ ಸೇರ್ಪಡೆಗೊಳ್ಳುವ ಕೊಂಚ ಮೊದಲೇ ಅಂದರೆ ೧೯೯೭ ಫೆಬ್ರವರಿ ಮಾಹೆಯಲ್ಲಿ ಡೇಂಗ್ ತೀರಿಕೊಂಡರು.

ಮುಂದೆ ಆದರ್ಶ ಜಗತ್ತಿನ ಬೆನ್ನಟ್ಟುತ್ತಾ ಮಾವೋ ೧೯೭೬ ಸೆಪ್ಟೆಂಬರ್ ೯ರಂದು ತೀರಿಕೊಂಡರು. ಮಾವೋರ ಮರಣದ ಸ್ವಲ್ಪ ಸಮಯದ ನಂತರ ಚೀನಾದಲ್ಲಿ ಅಧಿಕಾರಕ್ಕಾಗಿ ತ್ರಿಕೋನ ಶೈಲಿಯಲ್ಲಿ ಹೋರಾಟ ಪ್ರಾರಂಭವಾಯಿತು. ಸೌಮ್ಯವಾದಿಗಳ ಗುಂಪಿಗೆ ಹುಆ ಜಿಯೋಪೆಂಗ್ ನಾಯಕರಾಗಿದ್ದರೆ. ಗ್ಯಾಂಗ್ ಆಫ್ ಫೋರ್ ಇನ್ನೊಂದು ಗುಂಪಿಗೆ ನಾಯಕತ್ವ ವಹಿಸಿತು. ಇನ್ನೊಂದು ಗುಂಪಿನ ಡೆಂಗ್ ನಾಯಕರಾಗಿದ್ದರು. ಹುಆ ಮಾವೋರ ಕ್ರಾಂತಿಕಾರಿ ದೋರಣೆಯನ್ನು ಉಳಿಸಲು ಪ್ರಯತ್ನಿಸಿದರಾದರೂ ಅದು ಸಾಧ್ಯವಾಗಲಿಲ್ಲ. ಹುಆ ಮಾವೋರ ದುರ್ಬಲ ಆಯ್ಕೆಯಾಗಿದ್ದರು ಹುಆರು ಸೈದ್ಧಾಂತಿಕವಾಗಿ ಪೂರ್ಣಜ್ಞಾನವುಳ್ಳವರಾಗಿರಲಿಲ್ಲ. ಅಂತೆಯೇ ಅಧಿಕಾರದ ವಿಷಯವಾಗಿ ಹೆಚ್ಚು ತಿಳಿದಿರಲಿಲ್ಲ. ಸಿದ್ಧಾಂತದ ಪ್ರತಿಪಾದನೆಯಲ್ಲಿ ಹುಆ ಯಾವುದೇ ರೀತಿಯಲ್ಲೂ ಡೆಂಗ್‌ಜಿಯೋಪಿಂಗ್‌ರವರಿಗೆ ಸರಿಸಮನಾಗಿರಲಿಲ್ಲ. ಹುಆರ ಏನಕೇನ ಪ್ರಕಾರೇಣ ಎಂಬ ನೀತಿಯು ಚೀನಾದ ಕಮ್ಯುನಿಸ್ಟ್ ಪಕ್ಷವನ್ನು ಮತ್ತು ಚೀನಾದೇಶದ ಜನತೆಯನ್ನು ಒಲಿಸಿಕೊಳ್ಳಲು ವಿಫಲವಾಯಿತು. ಅಧಿಕಾರದ ರಾಜಕಾರಣದ ಆಟದಲ್ಲಿ ಹುಆ ಡೆಂಗ್‌ರ ಎದುರಿನಲ್ಲಿ ನಿಲ್ಲಲು ಸಾಧ್ಯವಾಗಲಿಲ್ಲ. ಅಧಿಕಾರದ ಆಟದಲ್ಲಿ ಡೆಂಗ್ ಕುಶಲ ಆಟಗಾರರಾಗಿದ್ದರು. ಅಧಿಕಾರದ ಕ್ಷೇತ್ರದಲ್ಲಿ ಪುನರ್‌ಸ್ಥಾಪಿತಗೊಂಡ ನಂತರ ಡೆಂಗ್ ಹುಆರ ಅಧಿಕಾರದ ಮೂಲ ಅಡಿಪಾಯಗಳನ್ನು ಕೆಡವುತ್ತಾ ಬಂದರು. ಚೀನಾದ ಕಮ್ಯುನಿಸ್ಟ್ ಪಕ್ಷದ ೧೦ ನೇ ಕೇಂದ್ರ ಸಮಿತಿಯ ನಾಯಕರಿಗೆ ತಮ್ಮ ಮುಖಂಡತ್ವದ ಸಾಮರ್ಥ್ಯದ ಬಗ್ಗೆ ಮನವರಿಕೆ ಮಾಡಿಕೊಡಲು ಡೆಂಗ್ ಸಮರ್ಥರಾದರಷ್ಟೇ ಅಲ್ಲ ಚೀನಾದ ಭವಿಷ್ಯವು ಹುಆರ ಕೈಗಳಿಗಿಂತಲೂ ತಮ್ಮ ಕೈಗಳಲ್ಲಿಯೇ ಸುರಕ್ಷಿತವಾಗಿದೆಯೆಂದು ಮನವರಿಕೆ ಮಾಡಿಕೊಡಲು ಯಶಸ್ವಿಯಾದರು. ಗ್ಯಾಂಗ್ ಆಫ್ ಫೋರ್‌ನ ದುರಾಲೋಚನೆಗೆ ಡೆಂಗ್ ತುತ್ತಾಗಿದ್ದರಿಂದ ಅವರು ಪಕ್ಷದ ಸಹಾನುಭೂತಿ ಮತ್ತು ಜನರ ಸಹಾನುಭೂತಿಯನ್ನು ಸಂಪಾದಿಸಿದ್ದರು. ಅಂತಿಮವಾಗಿ ೧೯೭೭ ರ ಅಕ್ಟೋಬರ್‌ನಲ್ಲಿ ಗ್ಯಾಂಗ್ ಆಫ್ ಫೋರ್‌ನ ಸದಸ್ಯರು ಬಂಧಿಸಲ್ಪಟ್ಟಿದ್ದರಿಂದ ಡೆಂಗ್ ರಾಜಕೀಯ ಆತ್ಮವಿಶ್ವಾಸವನ್ನು ಬೆಳೆಸಿಕೊಂಡರು. ೧೧ನೇ ಕೇಂದ್ರಸಮಿತಿಯ ೩ನೇ ವಾರ್ಷಿಕ ಸಭೆ ೧೯೭೮ ಡಿಸೆಂಬರ್‌ನಲ್ಲಿ ನಡೆಯಿತು. ಈ ಸಭೆಯು ಡೆಂಗ್‌ರವರ ರಾಜಕೀಯ ಜೀವನದಲ್ಲಿ ಒಂದು ಮೈಲಿಗಲ್ಲಾಗಿ ಪರಿಣಮಿಸಿತು. ಆಗ ಚೀನಾದ ನೀತಿಯ ಒತ್ತು, ರಾಜಕಾರಣದಿಂದ ಆರ್ಥಿಕತೆಯತ್ತ ತಿರುಗುವಂತೆ ಡೇಂಗ್ ಮಾಡಿದರು. ಲ್ಯೂ ಸೌಕಿಯರ ಅನುಯಾಯಿಯಾಗಿ ಮತ್ತು

ಮಾವೋರ ಸಾಂಸ್ಕೃತಿಕ ಕ್ರಾಂತಿಯ ನಿಷ್ಠುರ ವಿಮರ್ಶಕನಾಗಿ ಸಮಾಜವಾದಿ ಚೀನಾದ ಮುಖ್ಯ ಸಂಘರ್ಷ ಬಂಡವಾಳ ಮತ್ತು ಶ್ರಮದ ಮಧ್ಯೆ ಇರದೆ ಹಿಂದುಳಿದ ಉತ್ಪಾದಕ ಶಕ್ತಿಗಳು ಮತ್ತು ಮುಂದುವರಿದ ಕೈಗಾರಿಕಾ ಪದ್ಧತಿಯ ಮಧ್ಯೆ ಇದೆಯೆಂದು ಡೆಂಗ್ ಮನಗಂಡಿದ್ದರು.

ವಾಸ್ತವವಾಗಿ ಡೆಂಗ್‌ರ ಉದ್ದೇಶ ಮಾವೋ ಪ್ರತಿಪಾದಿಸಿದ್ದ ಶಾಶ್ವತ ಕ್ರಾಂತಿ ಎಂಬ ಸಿದ್ಧಾಂತವನ್ನು ಪುನರುಜ್ಜೀವನಗೊಳಿಸಬೇಕೆಂಬುದೇ ಆಗಿತ್ತು. ಮಾವೋ ಆಡಳಿತಕಾಲದಲ್ಲಿ ಡೆಂಗ್ ಈ ಶಾಶ್ವತ ಕ್ರಾಂತಿಯ ವಿಚಾರಕ್ಕೆ ಮಣಿದಿರಲಿಲ್ಲ. ಮುಂದೆ ೧೧ನೇ ಕೇಂದ್ರ ಸಮಿತಿಯ ಸರ್ವಸದಸ್ಯರ ಸಭೆಯಲ್ಲಿ ಇದುವರೆಗೆ ಚೀನಾ ಅನುಸರಿಸಿದ್ದ ವರ್ಗ ಸಂಘರ್ಷದ ನೀತಿಯ ಬದಲಾಗಿ ಆರ್ಥಿಕ ಅಭಿವೃದ್ಧಿಯ ನೀತಿಯನ್ನು ಅನುಸರಿಸುವಂತೆ ಮಾಡಲು ಡೆಂಗ್ ಯಶಸ್ವಿಯಾದರು. ಈ ನೀತಿಯನ್ನು ಅನುಸರಿಸಿದ್ದರಿಂದ ಚೀನಾ ಹೊಸ ದಿಕ್ಕಿನತ್ತ ಚಲಿಸಿತು. ಇದನ್ನು ಅಭಿವೃದ್ಧಿಯ ಯುಗವೆಂದು ಕರೆಯಬಹುದು. ೧೧ನೇ ಕೇಂದ್ರ ಸಮಿತಿಯು ತನ್ನ ಮೂರನೆಯ ಸರ್ವಸದಸ್ಯರ ಸಭೆಯಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಿದ್ದು ಒಂದು ಅರ್ಥದಲ್ಲಿ ಲ್ಯೂ ಸೌಕಿ ಮತ್ತು ಡೆಂಗ್‌ರವರ ವೈಚಾರಿಕ ವಿಜಯವಾಗುವುದರ ಜೊತೆಗೆ ಮಾವೋ ಮತ್ತು ಅವನ ಪುರೋಗಾಮಿ ಜೊತೆಗಾರರ ಸೋಲಿನ ಸಂಕೇತವೂ ಆಗಿತ್ತು. ರಾಜಕಾರಣಕ್ಕೆ ಸಲ್ಲುತ್ತಿದ್ದ ಮಹತ್ವವನ್ನು ಅರ್ಥಶಾಸ್ತ್ರಕ್ಕೆ ವರ್ಗಾಯಿಸಿದುದು ಚೀನಾದ ಅಂದಿನ ಸ್ವರೂಪದ ಬದಲಾವಣೆಯೇ ಆಗಿತ್ತು. ೧೯೭೯ ಮಾರ್ಚ್‌ನಲ್ಲಿ ಡೆಂಗ್ ನಾಲ್ಕು ಮೂಲತತ್ವಗಳನ್ನು ಜಾರಿಗೊಳಿಸಿದರು.

೧) ಮಾರ್ಕ್ಸ್‌ವಾದ-ಲೆನಿನ್‌ವಾದ-ಮಾವೋ-ಜೆಡಾಂಗ್ ವಿಚಾರ.
೨) ಕಮ್ಯುನಿಸ್ಟ್ ಪಕ್ಷ.
೩) ಸಮಾಜವಾದಿ ಮಾರ್ಗ.
೪) ಜನತೆಯ ಪ್ರಜಾತಾಂತ್ರಿಕ ಸರ್ವಾಧಿಕಾರತ್ವ.

ಈ ನಾಲ್ಕು ಮೂಲ ತತ್ವಗಳ ಉದ್ದೇಶ ಆಧುನಿಕತೆಯ ನೀತಿಯಿಂದುಂಟಾಗಬಹುದಾದ ಉಪ ಪರಿಣಾಮಗಳನ್ನು ತಡೆಯುವುದೇ ಆಗಿತ್ತು. ೧೯೭೮ರಿಂದ ೧೯೮೨ನೇ ಇಸವಿಯವರೆಗಿನ ಅವಧಿಯು ಚೀನಾ ಕಮ್ಯುನಿಸ್ಟ್‌ಪಕ್ಷದ ಪರಿವರ್ತನೆಯ ಘಟ್ಟವಾಗಿತ್ತು. ಆ ಸಮಯದಲ್ಲಿ ಚೀನಾದಾದ್ಯಂತ ಪುರೋಗಾಮಿ ಮಾವೋವಾದವು ಗಂಭೀರವಾದ ಪ್ರಶ್ನೆಗೆ ಒಳಗಾಯಿತು. ಈ ನಿರ್ದಿಷ್ಟ ಅವಧಿಯಲ್ಲಿ ಡೆಂಗ್ ಅನೇಕ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದರು. ಈ ಕ್ರಮ ಚೀನಾ ಸಮಾಜದ ಗಮನವನ್ನು ಸೆಳೆಯುವುದರ ಜೊತೆಗೆ ವಿದೇಶದ ನಾಯಕರ ಗಮನವನ್ನೂ ಸೆಳೆಯಿತು. ೧೯೮೨ ಸೆಪ್ಟೆಂಬರ್‌ನಲ್ಲಿ ನಡೆದ ಪಕ್ಷದ ೧೨ನೇ ಅಧಿವೇಶನದಲ್ಲಿ "ಚೀನಾ ವೈಖರಿಯ ಸಮಾಜವಾದ'' ಎಂಬ ಘೋಷಣೆಯನ್ನು ಡೆಂಗ್ ಪ್ರಸ್ತಾಪಿಸಿದ್ದರಿಂದ ಚೀನಾ ದೇಶದ ಬೆಳವಣಿಗೆಗಳನ್ನು ಗಮನಿಸುತ್ತಿದ್ದವರು ಸ್ತಂಭೀ ಭೂತರಾದರು.

ಚೀನಾ ಉಳಿಯಬೇಕಾದರೆ ಅದಕ್ಕೆ ಆಧುನಿಕತೆಯೊಂದೇ ಇರುವ ದಾರಿ. ಬಡತನದ ವೈಭವೀಕರಣ ಸಾಮ್ಯವಾದವಲ್ಲ ಮತ್ತು ಚೀನಾ ಶ್ರೀಮಂತವಾಗಲೇಬೇಕು ಮತ್ತು ಪ್ರವರ್ಧಮಾನವಾಗಲೇಬೇಕು ಎಂಬುದಾಗಿ ಡೆಂಗ್ ೧೨ನೇ ಕಾಂಗ್ರೆಸ್‌ನಲ್ಲಿ ವಾದ ಮಾಡಿದರು. ಜವಬ್ದಾರಿ ನಿರ್ವಹಿಸುವ ಪದ್ಧತಿ, ಬೋನಸ್ ಪದ್ಧತಿ ಮತ್ತು ಉಪವೃತ್ಪತ್ತಿ ಮುಂತಾದ ಡೆಂಗ್‌ರವರ ಸುಧಾರಣೆಗಳು ವಿವಾದಾತ್ಮಕವಾಗಿಯೇ ಉಳಿದವು. ೮೦ರ ದಶಕಗಳ ಆದಿಭಾಗದಲ್ಲಿ ಉದಾರವಾದಿಗಳು ಡೆಂಗ್‌ರವರ ಸುಧಾರಣೆಗಳಲ್ಲಿ ಭೌತಿಕ ಪ್ರೇರಣೆಯನ್ನು ಕಂಡುದುದಾದರೆ ಕಟ್ಟಾ ಮಾರ್ಕ್ಸ್‌ವಾದಿಗಳು ಚೀನಾವನ್ನು ಬಂಡವಾಳಶಾಹಿ ದೇಶವನ್ನಾಗಿ ಮಾಡುವುದಕ್ಕೆ ಕಾರಣವಾಗಿದೆಯೆಂದು ಟೀಕಿಸಿದರು. ಆದರೆ ನಿಜಸಂಗತಿ ಏನೆಂದರೆ ಚೀನಾದ ಇಡೀ ಜನಸಮುದಾಯವೇ ಶ್ರೀಮಂತಿಕೆಯ ಕನಸನ್ನು ಕಾಣುತ್ತಿತ್ತು. ಆದ್ದರಿಂದ ಶ್ರೀಮಂತಿಕೆಯಲ್ಲಿರುವ ಎಲ್ಲ ದೋಷಗಳೊಂದಿಗೆ ಆ ಸುಧಾರಣೆಗಳನ್ನು ಚೀನಾ ಹೃದಯಪೂರ್ವಕವಾಗಿ ಸ್ವಾಗತಿಸಿತು. ಡೆಂಗ್‌ರವರ ವಿಶೇಷ ಆರ್ಥಿಕ ವಲಯಗಳು ಮತ್ತು ಹಾಂಗ್‌ಕಾಂಗ್ ಮಾದರಿಯ ಪ್ರವರ್ಧಮಾನತೆ ತನ್ನೆಲ್ಲದೋಷಗಳೊಂದಿಗೆ ಅಭಿವೃದ್ಧಿಯನ್ನು ತಂದಿತು. ಆದರೆ ಅದರೊಂದಿಗೆ ಭ್ರಷ್ಟಾಚಾರ, ಹಣಮಾರಿಯಂತಹ ವಿರೋಧಾತ್ಮಕ ಸಂಗತಿಗಳು ಸಹ ಸಂಭವಿಸಿದವು. ಡೆಂಗ್ ಆರ್ಥಿಕ ಉದಾರೀಕರಣಕ್ಕೆ ಅವಕಾಶ ಕೊಡುತ್ತಲೇ ರಾಜಕೀಯ ಆಯ್ಕೆಯನ್ನು ಸೀಮಿತಗೊಳಿಸಿದರು. ಇದಕ್ಕೆ ವಿರುದ್ಧವಾದಂತಹ ಸಿದ್ಧಾಂತ ಮಾವೋರವರದಾಗಿತ್ತು. ಮಾವೋ ಸೂಚಿಸಿದ್ದ ಮಾದರಿ ವ್ಯವಸ್ಥೆಯಲ್ಲಿ ರಾಜಕಾರಣ ಮತ್ತು ಸಂಸ್ಕೃತಿಗಳಿಗೆ ಸಮಾನ ಮಹತ್ವವಿತ್ತು. ಭೌತಿಕ ಪ್ರೇರಣೆಗಳಿಗೆ ಹೆಚ್ಚಿನ ಗಮನವಿರಲಿಲ್ಲ.ಆದರೆ ಡೆಂಗ್‌ರ ನೀಲನಕ್ಷೆಯಲ್ಲಿ ರಾಜಕೀಯಜಾಗೃತಿ ಮತ್ತು ಸಾಂಸ್ಕೃತಿಕ ಮುನ್ನಡೆಗೆ ಅವಕಾಶವನ್ನು ಕೊಡದೆ ಭೌತಿಕ ಅಭಿವೃದ್ಧಿಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿತ್ತು.

೧೯೮೨ ರಿಂದ ೧೯೮೭ನೇ ಇಸವಿಯವರೆಗಿನ ಅವಧಿಯು ಚೀನಾದ ರಾಜಕಾರಣ ಮತ್ತು ಸಮಾಜದಲ್ಲಿ ಅತ್ಯಂತ ಹುಯ್ದಾಟದ ಕಾಲವಾಗಿತ್ತು. ಆ ಸಮಯದಲ್ಲಿ ಪುರೋಗಾಮಿ ರಾಜಕಾರಣ ತನ್ನ ತಾತ್ವಿಕ ಪ್ರಖರತೆಯನ್ನು ಕಳೆದುಕೊಳ್ಳುತ್ತಾ ಬಂತು. ಈ ವಿಶಿಷ್ಟ ಅವಧಿಯಲ್ಲಿ ಡೆಂಗ್ ಮತ್ತು ಅವರ ಸಿದ್ಧಾಂತಿಗರು ಚೀನಾ ಬಂಡವಾಳಶಾಹಿಯ ಐತಿಹಾಸಿಕ ಘಟ್ಟವನ್ನು ಅನುಭವಿಸದೆ ಇದ್ದುದರಿಂದ ಚೀನಾ ವಸ್ತು ಆಧಾರಿತ ಉನ್ನತ ಅರ್ಥವ್ಯವಸ್ಥೆಯನ್ನು ಸಾಧಿಸಲೇಬೇಕು ಮತ್ತು ತನ್ಮೂಲಕ ಸಾಮ್ಯದಾದದ ದಡವನ್ನು ತಲುಪಬೇಕೆಂಬ ವಾದ ಮಾಡಿದರು. ಆರ್ಥಿಕೋನ್ನತಿಗೆ ಅತ್ಯಗತ್ಯವಾದ ಉತ್ಪಾದಕ ಮೂಲವನ್ನು ಅಭಿವೃದ್ಧಿಪಡಿಸುವುದೇ ಸಾಮ್ಯದಾದದ ಅಂತಿಮ ಗುರಿಯಾಗಿದೆ. ಸಮಾಜವಾದದ ಪ್ರಾಥಮಿಕ ಹಂತದ ಸ್ಥಿತಿಯಲ್ಲಿ ಆರ್ಥಿಕವಾಗಿ ಭಿನ್ನ ಭಿನ್ನ ಪ್ರಕಾರದ ರೂಪಗಳು

ತಮ್ಮ ಅಸ್ಥಿತ್ವವನ್ನು ಮುಂದುವರೆಸಿಕೊಂಡೇ ಹೋಗುವವು. ಪ್ರತಿಯೊಬ್ಬನಿಗೂ ಅವನ ಕೆಲಸಕ್ಕನುಸಾರ ಪ್ರತಿಫಲ ಎಂಬ ತತ್ವವು ಈ ಅವಧಿಯಲ್ಲಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳ್ಳುವುದು. ಈ ನಿರ್ಧಿಷ್ಟ ಅವಧಿಯಲ್ಲಿ ಚೀನಾ ಕೈಗಾರೀಕರಣದ ಉನ್ನತ ಮಟ್ಟವನ್ನು ಸಾಧಿಸಬೇಕೆಂದು ಡೆಂಗ್ ಪ್ರತಿಪಾದಿಸಿದರು. ೧೯೮೨ ರಿಂದ ೧೯೮೭ ನೇ ವರೆಗಿನ ಅವಧಿಯಲ್ಲಿ ಚೀನಾ ಸಮಾಜದಲ್ಲಿ ಆರ್ಥಿಕ ಉದಾರೀಕರಣವು ಅನೇಕ ಅನಗತ್ಯ ಉಪಪರಿಣಾಮಗಳನ್ನು ಉಂಟುಮಾಡಿತು. ಲಂಚಗುಳಿತನ, ಭ್ರಷ್ಟಾಚಾರ, ದುರುಪಯೋಗತನ, ಆರೋಗ್ಯ ಮತ್ತು ಶೈಕ್ಷಣಿಕ ಕ್ಷೇತ್ರದ ಖಾಸಗೀಕರಣ, ಕಾರ್ಮಿಕರ ವಜಾ ಮಾಡುವಿಕೆ, ವ್ಯಕ್ತಿವಾದದ ಹೆಚ್ಚಳ ಮತ್ತು ರಾಜಕೀಯ ಪ್ರಜ್ಞೆಯ ಇಳಿಮುಖ ಮುಂತಾದವುಗಳು ಈ ಅವಧಿಯಲ್ಲಿ ಉಂಟಾದ ಉಪಪರಿಣಾಮಗಳು, ಡೆಂಗ್‌ರವರ ಆಧುನಿಕತೆಯ ರೂಪುರೇಷೆಗಳು ಕೂಡ ಚೀನಾದಲ್ಲಿ ಸ್ವಚ್ಛಂಧತೆಯ ಪರಿಣಾಮುವನ್ನುಂಟುಮಾಡಲು ಕಾರಣವಾಯಿತು. ಈ ಕಾರಣದಿಂದಾಗಿ ತಮ್ಮನ್ನು ಪುನರ್‌ಸ್ಥಾಪಿಸಿಕೊಂಡ ಬುದ್ಧಿಜೀವಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮ ಪ್ರಭಾವವನ್ನು ಬೀರಲು ಪ್ರಾರಂಭಿಸಿದರು. ವಿದೇಶಗಳಿಗೆ ಹೋದ ಶ್ರೀಮಂತ ಮಕ್ಕಳು ಚೀನಾದಲ್ಲಿ ಪಾಶ್ಚಿಮಾತ್ಯರೀತಿಯ ಪ್ರಜಾಪ್ರಭುತ್ವವನ್ನು ಅನುಭವಿಸುವ ಕನಸನ್ನು ಕಾಣಬಯಸಿದರು. ಅದರಲ್ಲಿಯೂ ಮುಖ್ಯವಾಗಿ ೧೯೮೬ ರ ಕೊನೆಯಲ್ಲಿ ಡೆಂಗ್‌ರವರ ಅದ್ವಿತೀಯ ಉತ್ತರಾಧಿಕಾರಿಯಾದ ಹೂಯಾವೊ ಬೆಂಗ್ ನನ್ನು ತೆಗೆದುಹಾಕಿ ಜಾವೊಜಿಂಯಾಂಗ್‌ನನ್ನು ಅಧಿಕಾರಕ್ಕೆ ಕೂಡಿಸಲಾಯಿತು. ಮತ್ತು ೧೯೮೯ ರ ಜೂನ್‌ನಲ್ಲಿ ನಡೆದ ವಿದ್ಯಾರ್ಥಿ ತುಮುಲದ ಕಾರಣದಿಂದಾಗಿ ಜಾವೊಜಿಯಾಂಗ್‌ನನ್ನು ತೆಗೆದುಹಾಕಿ ಜಿಯೆಂಗ್‌ಜೆಮಿನಿ ನನ್ನು ತಾತ್ಕಾಲಿಕವಾಗಿ ಅಧಿಕಾರಕ್ಕೆ ತರಲಾಯಿತು. ೧೯೮೨ ರಿಂದ ೧೯೮೭ ರವರೆಗೆ ಚೀನಾದಲ್ಲಿ ಡೆಂಗ್‌ಜಿಂರೋಪಿಂಗ್ ಅತ್ಯಧಿಕವಾದ ಅಧಿಕಾರವನ್ನು ಅನುಭವಿಸಿದರು. ಆದರೆ ೮೦ ರ ದಶಕಗಳ ಕೊನೆಯಲ್ಲಿ ಸಂಭವಿಸಿದ ವಿದ್ಯಾರ್ಥಿ ಗಲಭೆ ಚೀನಾದೇಶವನ್ನು ಆಳುವ ಡೆಂಗ್‌ರ ಅಧಿಕಾರವನ್ನು ಪ್ರಶ್ನಿಸಿತು. ೧೯೮೭ ಜನವರಿಯಲ್ಲಿ ಹೂಯಾವೊಬೆಂಗ್‌ನನ್ನು ತೆಗೆದುಹಾಕಿ ಜಾವೊಜಿಯಾಂಗ್‌ನನ್ನು ಚೀನಾ ಕಮ್ಯುನಿಸ್ಟ್‌ಪಕ್ಷದ ಸಾಮಾನ್ಯ ಕಾರ್ಯದರ್ಶಿ ಎಂದು ನಿಯಮಿಸಲಾಯಿತು. ೧೯೮೭ ಅಕ್ಟೋಬರ್‌ನಲ್ಲಿ ನಡೆದ ಚೀನಾದ ಕಮ್ಯುನಿಸ್ಟ್‌ಪಕ್ಷದ ೧೩ ನೇ ಸಮಾವೇಶದಲ್ಲಿ ಸಮಾಜವಾದದ ಮೊದಲಹಂತದ ಸಿದ್ಧಾಂತವನ್ನು ರೂಪಿಸಲಾಯಿತು. ಆ ಸಿದ್ಧಾಂತದ ಮೇರೆಗೆ ಕಮ್ಯುನಿಸ್ಟ್‌ಪಕ್ಷವು ತನ್ನ ಜನತೆಗೂ ಮತ್ತು ಹೊರಗಿನ ಜಗತ್ತಿಗೂ ಚೀನಾದ ಸಮಾಜವಾದವು ಸಮಾಜದ ಬಹು ದೊಡ್ಡ ಭಾಗವೊಂದನ್ನು ಬಡತನ ಮತ್ತು ಹಸಿವೆಯಿಂದ ಮುಕ್ತಗೊಳಿಸಿದೆಯೆಂದೂ ಪ್ರಜಾತಂತ್ರಾತ್ಮಕ ಚಳುವಳಿ ಚೀನಾದ ಕಮ್ಯುನಿಸ್ಟ್ ಆಡಳಿತಗಾರರಿಗೆ ತೊಂದರೆಯನ್ನು ಕೊಡುತ್ತಿದೆಯೆಂದೂ ಮನಗಾಣಿಸಲು

ತೀವ್ರವಾಗಿ ಪ್ರಯತ್ನಿಸಿತು. ಇದೇ ಹೊತ್ತಿಗೆ ೧೩ನೇ ಕೇಂದ್ರಸಮಿತಿಯ ಸರ್ವಸದಸ್ಯರ ಸಭ್ಲೆ (ಜೂನ್ ೧೯೮೯ರಲ್ಲಿ) ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೂ ಮತ್ತು ಮಿಲಿಟರಿ ಆಯೋಗಕ್ಕೂ ತಮ್ಮ ರಾಜಿನಾಮೆಯನ್ನು ಅಂಗೀಕರಿಸಬೇಕೆಂಬ ಡೆಂಗ್‌ರವರ ವಿನಂತಿಯನ್ನು ಅಂಗೀಕರಿಸಿತು. ಇದರಿಂದಾಗಿ ಪಕ್ಷದಲ್ಲಿ ಉಳಿದಿದ್ದ ಮಾವೋ ವಾದಿಗಳಿಗೆ ಅನುಕೂಲವಾಯಿತು. ೧೯೮೯ರಿಂದ ೧೯೯೨ರ ಅವಧಿಯಲ್ಲಿ ಮಾವೋವಾದದ ಪುನಶ್ಚೇತನ ಬಹಳ ಪ್ರಭಾವಕಾರಿಯಾಗಿತ್ತು. ಈ ಪ್ರಭಾವದ ಕಾರಣದಿಂದಾಗಿ ಡೆಂಗ್‌ರ ಸುಧಾರಣೆಗಳನ್ನು ಬಹುವಾಗಿ ಸಮರ್ಥಿಸುತ್ತಿದ್ದ ಚೆನ್-ಯುನ್ ಮತ್ತು ಲಿಪೆಂಗ್
ಕೂಡ ಚೀನಾದ ಅಭಿವೃದ್ಧಿಯ ದಿಕ್ಕನ್ನು ಬದಲಾಯಿಸಬೇಕೆಂದು ಸೂಚಿಸಿದರು. ಆದರೆ ಚೀನಾದ ರಾಜಕೀಯ ದಿಕ್ಕನ್ನು ಹಾಗೂ ಸಿದ್ಧಾಂತವನ್ನು ಪುನರ್‌ಪರಿಶೀಲಿಸಲು ಡೆಂಗ್‌ಆಗಲೇ ತೀರ್ಮಾನಿಸಿದ್ದರು. ತಮ್ಮ ಈ ಉದ್ದೇಶವನ್ನು ಡೆಂಗ್ ಪಕ್ಷದ ೧೪ನೇ ಸಮಾವೇಶದಲ್ಲಿ ಯಶಸ್ವಿಯಾಗಿ ನೆರವೇರಿಸಿದರು. (ಅಕ್ಟೋಬರ್ ೧೯೯೨)

೧೯೯೭ ರಲ್ಲಿಜಿಯಾಂಗ್ ಮತ್ತು ಅವರ ಸಂಗಡಿಗರು ಪಕ್ಷದ ೧೫ನೇ ಸಮಾವೇಶವನ್ನು ಕರೆಯಲು ತೊಡಗಿದ್ದಾಗ ಅತ್ಯುನ್ನತ ದರ್ಜೆಯ ಮುಖಂಡರಾಗಿದ್ದ ಡೆಂಗ್ ಜಿಯೋಪಿಂಗ್ ಅದೇ ವರ್ಷ ಫೆಬ್ರವರಿ ೧೯ ರಂದು ತೀರಿಕೊಂಡರು. ಇಡೀ ದೇಶವು ಡೆಂಗ್‌ರವರ ಮರಣಕ್ಕಾಗಿ ಶೋಕಿಸಿತು. ಮಾವೋ ನಂತರದ ಸುಧಾರಣೆಗಳಿಗಾಗಿ ಅವರನ್ನು ಜ್ಞಾಪಿಸಿಕೊಂಡಿತು. ಡೆಂಗ್‌ರ ೩ನೇ ಕೃಪಾಕಟಾಕ್ಷಿತ ನಾಯಕನಾಗಿದ್ದ ಜಿಯಾಂಗ್‌ಜೆಮಿನಿ ಬಹಳ ದುಃಖಪೂರಿತವಾಗಿ ತಮ್ಮ ದುಃಖದ ಸಂದೇಶವನ್ನು ಡೆಂಗ್‌ರ ಅಂತ್ಯ ಕ್ರಿಯೆಯ ಸಂದರ್ಭದಲ್ಲಿ ಓದಿದರು. ಆ ಒಕ್ಕಣೆ ಹೀಗಿತ್ತು. "ನಾವು ಡೆಂಗ್ ಜಿಯೋಪಿಂಗ್ ರವರನ್ನು ಇಷ್ಟಪಡಬಹುದು ಅಥವಾಇಷ್ಟಪಡದೇ ಇರಬಹುದು ಇದು ಬೇರೆಯೇ ವಿಷಯ. ಆದರೆ ಆಧುನಿಕ ಚೀನಾದ ಇತಿಹಾಸದಲ್ಲಿ ಡೆಂಗ್‌ರ ಪಾತ್ರವನ್ನು ಸುಲಭವಾಗಿ ತಳ್ಳಿಹಾಕಲಾಗದು" ಡೆಂಗ್‌ರ ಜನ್ಮಶತಾಬ್ಧಿಯ ಸಂದರ್ಭದಲ್ಲಿ ಆಗಸ್ಟ್ ೨೨ ರಂದು ಹೂಜಿಂಟಾವೊ ಈ ರೀತಿ ಉದ್ಗರಿಸಿದರು. "ಡೆಂಗ್‌ರ ವಿಚಾರಗಳು ಚೀನಾ ದೇಶಕ್ಕೆ ಸದಾಕಾಲ ಮಾರ್ಗದರ್ಶಕವಾಗಿರುತ್ತವೆ."

ಮೂಲ-ಮೇನ್‌ಸ್ಟ್ರೀಮ್

ಅನುವಾದ-ಸು.ಕೌ.

ಇಂದಿನ ಮಕ್ಕಳು ಮತ್ತು ಕನ್ನಡ

ಲೇ -ಚಿ.ವಿ.ಶ್ರೀನಾಥಶಾಸ್ತ್ರಿ

(ಲೇಖಕರು ಬೆಂಗಳೂರಿನ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗ ಶಾಲೆಯ ವಿಜ್ಞಾನಿ)

ಈ ವರ್ಷದ ಎಸ್. ಎಸ್. ಎಲ್. ಸಿ. ಮತ್ತು ಪಿ.ಯು. ಪರೀಕ್ಷೆಗಳ ಫಲಿತಾಂಶಗಳಲ್ಲಿ ಶೇಕಡವಾರು ಉತ್ತೀರ್ಣ ಮತ್ತು ಅಂಕಗಳಿಕೆಯಲ್ಲಿ ಬೆಂಗಳೂರಿಗಿಂತ ಗ್ರಾಮಾಂತರ ವಿದ್ಯಾರ್ಥಿಗಳು ಮೇಲುಗೈ ಪಡೆದಿದ್ದಾರೆಂದು ನಗರ ಪ್ರದೇಶದ ಪೋಷಕರಿಗೆ ಆತಂಕ. ಗ್ರಾಮೀಣ ಪ್ರದೇಶದವರಿಗೆ ಅಚ್ಚರಿ; ಇದಕ್ಕೆ ಕಾರಣಗಳನ್ನು ಅಧ್ಯಯನ ಮಾಡಬೇಕೆಂಬ ಹೇಳಿಕೆಗಳೂ ಪ್ರಕಟವಾದವು. ಈ ಹಿನ್ನೆಲೆಯಲ್ಲಿ ಶಿಕ್ಷಣ ಕ್ಷೇತ್ರವನ್ನು ಕಾಡುತ್ತಿರುವ ಭಾಷಾ ಮಾಧ್ಯಮ ಸಮಸ್ಯೆ ಚರ್ಚೆಗೆ ಯೋಗ್ಯ.

ವೈಮಾನಿಕ ಸಂಶೋಧನೆ ಮತ್ತು ಅಭಿವೃದ್ಧಿ ಮಂಡಲಿಯುವರು ಕಾನ್ಪುರದಲ್ಲಿರುವ ಐ.ಟಿ.ಐ. ಯಲ್ಲಿ ನಡೆಸಿದ ವಾರ್ಷಿಕ ಸಭೆಯಲ್ಲಿ ವೈಮಾಂತರಿಕ್ಷ ಕ್ಷೇತ್ರದ ಸಂಸ್ಥೆಗಳ ವಿಜ್ಞಾನಿಗಳು ಹಾಗೂ ಐ.ಟಿ.ಐ. ಗಳ ಪ್ರಾಧ್ಯಾಪಕರು ಭಾಗವಹಿಸಿದ್ದರು. ಬಿಡುವಿನ ವೇಳೆಯಲ್ಲಿ ಹಲವು ಹಿರಿಯ ಪ್ರಾಧ್ಯಾಪಕರು ಮತ್ತು ಸಮ್ಮೇಳನಕ್ಕೆ ಬಂದಿದ್ದ ವಿಜ್ಞಾನಿಗಳು ಮಾತನಾಡುತ್ತ ಕುಳಿತೆವು. ಆಗ;

ಇತ್ತೀಚೆಗೆ ಐ.ಟಿ.ಐ.ಗಳಿಗೆ ಸೇರುತ್ತಿರುವ ಬಹಳಷ್ಟು ವಿದ್ಯಾರ್ಥಿಗಳಿಗೆ ತಮ್ಮ ವಿಶೇಷ ಪರಿಣತಿಯ ವಿಷಯದಲ್ಲಿ ಆಳವಾದ ಹಾಗೂ ಮೂಲಭೂತ ಪರಿಜ್ಞಾನವಿರುವುದಿಲ್ಲ. ಎಂದು ಪ್ರೊಫೆಸರ್ ಒಬ್ಬರು ಹೇಳಿದ್ದು ಎಲ್ಲರ ಕುತೂಹಲ ಚರ್ಚೆಗಳಿಗೆ ಕಾರಣವಾಯಿತು.

ಐ.ಟಿ.ಐ. ಗಳಿಗೆ ಸೇರಲು ಅರ್ಜಿ ಹಾಕುವವರು ಶೇಕಡ ೭೫ರಿಂದ ೯೫ರ ವರೆಗೆ ಅಂಕಗಳನ್ನು ಗಳಿಸಿರುತ್ತಾರಲ್ಲವೆ ಎಂದು ಒಬ್ಬರ ಉದ್ಗಾರ. ಆದರೆ ಅಂಕಗಳಿಕೆಯೇ ಬುದ್ಧಿವಂತಿಕೆಗೆ ಅಳತೆಗೋಲಲ್ಲ. ಅವರುಗಳು ಮೌಖಿಕ. ಸಂದರ್ಶನದಲ್ಲಿ ಮುಗ್ಗರಿಸುತ್ತಾರೆ; ವಿಷಯದ ಬಗ್ಗೆ ತಳಸ್ಪರ್ಶಿ ಜ್ಞಾನವಿರುವುದಿಲ್ಲ. ಐ.ಟಿ.ಐ.ಗೆ ಸೇರಿದ ನಂತರ ಅವುಗಳನ್ನು ಕಲಿಯಲಾರರು; ಏಕೆಂದರೆ ತಾವು ಕಲಿಯುವ ವಿಚಾರದ ಆಂತರ್ಯವನ್ನು ತಿಳಿಯಬೇಕೆಂಬ ಪ್ರವೃತ್ತಿಯೇ ಅವರಿಗಿರುವುದಿಲ್ಲ, ಎಂಬುದು ಇನ್ನೊಬ್ಬರ ಅಭಿಪ್ರಾಯ.

ಹಾಗಿದ್ದರೆ ಪದವಿ ಮಟ್ಟದ ವಿದ್ಯಾಭ್ಯಾಸ ಸರಿ ಇಲ್ಲವೇ ಅಥವಾ ಅಲ್ಲಿ ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗದರ್ಶನವಿಲ್ಲವೇ ಎಂಬ ಪ್ರಶ್ನೆ ಬಂದಿತು. ಪದವಿ ಮಟ್ಟದಲ್ಲಿ ನಿಗದಿತ ಪಾಠಗಳನ್ನು ಕಲಿಯಲು ವಿದ್ಯಾರ್ಥಿಗಳು ಹೆಚ್ಚು

ಸ್ವತಂತ್ರರು; ಆದರೆ ಸಾಮಾನ್ಯವಾಗಿಅವರ ದೃಷ್ಟಿ ಕೇವಲ ಪರೀಕ್ಷೆ ಕಡೆಗೆ. ಹೆಚ್ಚು ಅಂಕ ಗಳಿಸಬೇಕೆಂಬುದೇ ಅವರ ಆತಂಕ ಎಂಬುದು ಅಲ್ಲಿದ್ದ ಎಲ್ಲರ ಒಟ್ಟು ಅಭಿಪ್ರಾಯ.

ಅಂದರೆ ಈಗಿನ ಬಹಳಷ್ಟು ಅಂದರೆ ನೂರಕ್ಕೆ ೮೦ರಿಂದ ೯೦ ವಿದ್ಯಾರ್ಥಿಗಳು ಎಷ್ಟೇ ಉತ್ಸಾಹ ಚಟುವಟಿಕೆಗಳಿಂದ ಇದ್ದರೂ. ಅವರಿಗೆ ವಿಷಯಗಳ ಮೂಲವನ್ನು ಅರಸುವ ಜಾಯಮಾನ ಇಲ್ಲ; ಈ ಪ್ರವೃತ್ತಿ ಅವರಲ್ಲಿ ಬೆಳೆದಿಲ್ಲ. ಇದೇಕೆ ಹೀಗೆ ಎಂಬುದೇ ಅಲ್ಲಿದ್ದವರ ಆತಂಕದ ಪ್ರಶ್ನೆ; ಪ್ರಶ್ನೆಗೆ ಉತ್ತರ ಹುಡುಕುವ ಕಾತರ.

ತಮ್ಮ ಕಲಿಕೆಯ ವಿಷಯಗಳನ್ನು ಕುರಿತು ಕುತೂಹಲವನ್ನು ಬೆಳೆಸಿಕೊಳ್ಳುವ, ಆಳವಾಗಿ ಯೋಚಿಸುವ, ಆ ಬಗ್ಗೆ ಮನದಲ್ಲಿ ಮಂಥನ ಮಾಡುವ ಪ್ರವೃತ್ತಿ ಚಿಕ್ಕ ವಯಸ್ಸಿನಲ್ಲಿ ಬರದಿದ್ದರೆ ಅದು ಮುಂದೆಂದೂ ಸಾಧ್ಯವಿಲ್ಲ. ಬಹಳಷ್ಟು ಮಕ್ಕಳಿಗೆ ಈ ರೀತಿಯ ಮನೋಭಾವ ಬೆಳೆಯುವುದು ಸುಮಾರು ೧೫ವರ್ಷದೊಳಗೇ ಹೊರತು ಅನಂತರದಲ್ಲಿ ಅಲ್ಲ ಎಂಬುದು ಅಲ್ಲಿದ್ದ ಎಲ್ಲರ ಪ್ರಮುಖ ಅಭಿಪ್ರಾಯವಾಯಿತು. ಅರ್ಥಾತ್. ಇಂದಿನ ಬಹುತೇಕ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದಲ್ಲಿನ ವಿದ್ಯಾಭ್ಯಾಸವೇ ಮುಳುವಾಗುತ್ತಿರುವ ಅಂಶ ಈ ಚರ್ಚೆಯಲ್ಲಿ ಕಂಡು ಬಂದಿತು.

ಹಾಗಿದ್ದಲ್ಲಿ ಆರಂಭದ ಹಂತಗಳಲ್ಲಿ ವಿದ್ಯಾಭ್ಯಾಸಕ್ಕೆ ಈಗ ಏನಾಗಿದೆ? ಅಧ್ಯಾಪಕರಿಗೆ ಸರಿಯಾದ ಮಾಹಿತಿಗಳಿಲ್ಲವೇ? ಅವರು ಅಧ್ಯಾಪನ ಮಾಡಲು ಅನರ್ಹರಾಗುತ್ತಿದ್ದಾರೆಯೇ ಮುಂತಾದ ಪ್ರಶ್ನೆಗಳು ಕಾಡಲಾರಂಭಿಸಿದವು.

ಆದರೆ ಈಗಿನ ಬಹಳಷ್ಟು ಅಧ್ಯಾಪಕರಿಗೆ ಹೆಚ್ಚಿನ ಲೋಕಜ್ಞಾನವಿದೆ; ಮಾಹಿತಿಗಳ ಮಹಾಪೂರ, ಅತ್ಯಾಧುನಿಕ ಪರಿಕರಗಳು ಹಾಗೂ ಸೌಲಭ್ಯಗಳಿವೆ. ಆದ್ದರಿಂದ ಮೇಲ್ಕಂಡ ಅನುಮಾನಗಳಿಗೆ ಆಸ್ಪದವೇ ಇಲ್ಲ ಎಂಬುದನ್ನು ಎಲ್ಲರೂ ಒಪ್ಪಿದರು.

ಹಾಗಿದ್ದರೆ ಸಮಸ್ಯೆಯ ಮೂಲವೆಲ್ಲಿ? ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಲ್ಲಿ ಇಂದಿನ ಬಹುತೇಕ ಮಕ್ಕಳು ತಾವು ಕಲಿಯುವ ವಿಷಯಗಳನ್ನು ಕುರಿತು ಚಿಂತಿಸಲಾರದಂತೆ ತಡೆಯಾಗುತ್ತಿರುವ ಅಂಶಗಳೇನು? ಇದಕ್ಕೆ ಕಾರಣಗಳೇನು? ಶಿಕ್ಷಕರೇ ಅಥವಾ ಶಿಕ್ಷಣ ವ್ಯವಸ್ಥೆಯೇ? ಪಠ್ಯವೇ? ಶಿಕ್ಷಣ ಮಾಧ್ಯಮವೇ? ಇವೇ ಮುಂತಾಗಿ ವಿಚಾರ ವಿನಿಮಯಗಳು ಆರಂಭವಾದವು. ಅಪಾರ ಅನುಭವ ಗಳಿಸಿದ ಪ್ರಾಧ್ಯಾಪಕರು ಹಾಗೂ ವಿಜ್ಞಾನಿಗಳು ಈ ಗಂಭೀರವಾದ ವಿಚಾರಗಳನ್ನು ಕುರಿತು ಮಾತುಕತೆಗಳನ್ನಾಡುತ್ತಲೇ ಶಿಕ್ಷಣ ಮಾಧ್ಯಮವೇ ಈ ಎಲ್ಲಾ ಸಮಸ್ಯೆಗಳಿಗೆ ಮೂಲ ಎಂಬುದನ್ನು ಕಂಡುಕೊಂಡರು. ವಿದ್ಯಾಭ್ಯಾಸದ ಗುರಿ ವಿದ್ಯಾರ್ಥಿಗಳಿಗೆ ವಿಷಯವನ್ನು ಮನದಟ್ಟು ಮಾಡಿಸಿ ಅದನ್ನು

ಕುರಿತು ಚಿಂತಿಸುವ ಪ್ರವೃತ್ತಿ ಉಂಟುಮಾಡುವುದು; ಇದು ವಿದ್ಯಾರ್ಥಿಯ ಮಾತೃಭಾಷೆಯಲ್ಲಿ ಮಾತ್ರ ಸಾಧ್ಯ ಎಂಬುದನ್ನು ಎಲ್ಲರೂ ಒಪ್ಪಿಕೊಂಡರು.

ಆದ್ದರಿಂದ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿ ಆಗುವುದೇ ನಿಜವಾದ ಶಿಕ್ಷಣ. ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಆಸಕ್ತಿ ಹುಟ್ಟಬೇಕು; ಅವರು ವಿಷಯಗಳನ್ನು ಚೆನ್ನಾಗಿ ಗ್ರಹಿಸಿ ಅವುಗಳನ್ನು ಕುರಿತು ಚಿಂತನೆ ನಡೆಸಬೇಕು; ಉತ್ತರಗಳನ್ನು ತಮ್ಮದೇ ಶೈಲಿಯ ತಮ್ಮದೇ ವಾಕ್ಯಗಳಲ್ಲಿ ಬರೆಯಬೇಕು. ಈ ಪ್ರವೃತ್ತಿ ಬೆಳೆಸುವುದೇ ಸರಿಯಾದ ಶಿಕ್ಷಣ. ಇದಕ್ಕೆ ತಕ್ಕುದಾದ ಮಾಧ್ಯಮದ ಬಗ್ಗೆ ಗೊಂದಲ. ತಕರಾರುಗಳಿಗೆ ಅವಕಾಶವೇ ಇಲ್ಲ. ಪಾಠಗಳನ್ನು ಸಂತಸದಿಂದ ಕಲಿಯಬಹುದಾದ ಭಾಷೆಯೇ ಮಾತೃಭಾಷೆ. ಅದೇ ಶಿಕ್ಷಣ ಮಾಧ್ಯಮ ಇದೇ ಸರಿ ಎಂದು ವಿಶ್ವಾದ್ಯಂತ ಎಲ್ಲಾ ಶಿಕ್ಷಣ ತಜ್ಞರೂ ಮನಶಾಸ್ತ್ರಜ್ಞರೂ ಮತ್ತೆ ಮತ್ತೆ ಹೇಳುತ್ತಲೇ ಬಂದಿದ್ದಾರೆ.

ಆಧುನಿಕ ವಿಜ್ಞಾನ ತಂತ್ರಜ್ಞಾನಗಳ ಭಾಷೆ ಇಂಗ್ಲೀಷ್ ಆಗಿರುವುದೇನೋ ನಿಜ. ಆದರೆ ಕನ್ನಡಿಗರು ಅವುಗಳನ್ನು ಕನ್ನಡದ ಮೂಲಕ ಕಲಿಯುವುದರಲ್ಲಿ ಯಾವ ತೊಡಕೂ ಇಲ್ಲ. ನಮ್ಮ ಅರಿವಿಗೆ ಬಂದ ವಿಷಯುಗಳನ್ನು ಅಭಿವ್ಯಕ್ತಗೊಳಿಸುವ ಶಕ್ತಿ ಇದ್ದರೆ ಮಾತ್ರ ಅದು ಭಾಷೆ; ಎನಿಸಿಕೊಳ್ಳುತ್ತದೆ. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸದ ಕನ್ನಡಕ್ಕೆ ಇದು ಖಂಡಿತಾ ಸಾಧ್ಯ. ಅತ್ಯಾಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ವಿಚಾರಗಳನ್ನೂ ಕನ್ನಡದಲ್ಲಿ ಸುಲಭವಾಗಿ ಮತ್ತು ಸರಳವಾಗಿ ತಿಳಿಸಬಹುದು ಇದನ್ನು ಈಗಾಗಲೇ ಅನೇಕ ವಿಜ್ಞಾನ ಪುಸ್ತಕಗಳು. ಪತ್ರಿಕೆಗಳು ಮತ್ತು ಲೇಖನಗಳ ಮೂಲಕ ತೋರಿಸಿಕೊಡಲಾಗಿದೆ.

ಇವುಗಳನ್ನು ಯೋಚಿಸದ ಅನೇಕ ಶಾಲೆಗಳ ಅಧ್ಯಾಪಕರು, ಆಡಳಿತ ವರ್ಗದವರು, ತಂದೆ ತಾಯಿಗಳು ವಿಜ್ಞಾನ ತಂತ್ರಜ್ಞಾನ ವಿಚಾರಗಳೆಲ್ಲಾ ಇಂಗ್ಲೀಷ್‌ನಲ್ಲಿವೆ; ಇಂಗ್ಲೀಷ್ ಬಾರದಿದ್ದರೆ ಮಕ್ಕಳಿಗೆ ಕೀಳರಿಮೆ ಉಂಟಾಗುತ್ತದೆ; ಇತರ ದೇಶಗಳೊಡನೆ ವ್ಯವಹರಿಸಲು ಇಂಗ್ಲೀಷ್ ಇಲ್ಲದೆ ಗತ್ಯಂತರವಿಲ್ಲ ಎಂದು ಉದ್ಗರಿಸುತ್ತಾರೆ. ಕನ್ನಡ ಮಾಧ್ಯಮ ಎನ್ನುವವರು ಇಂಗ್ಲೀಷ್ ಬೇಡ ಎನ್ನುತ್ತಾರೆ. ಎಂಬುದೇ ಇವರುಗಳಿಗಿರುವ ಪೂರ್ವಾಗ್ರಹ. ಇದು ದೂರವಾಗಬೇಕು. ಶಿಕ್ಷಣ ಮಾಧ್ಯಮ ಕನ್ನಡ ಎನ್ನುವ ಯಾರೂ ಇಂಗ್ಲಿಷ್ ಬೇಡ ಎನ್ನುವುದೇ ಇಲ್ಲ. ಇಂಗ್ಲೀಷ್ ಬೇಕೇ ಬೇಕು. ಇಂಗ್ಲೀಷ್‌ನ್ನು ಚೆನ್ನಾಗಿ ಕಲಿಸಿ ಎಂದೇ ಎಲ್ಲರೂ ಹೇಳುತ್ತಾರೆ.

ಇನ್ನೂ ಹಲವರು ಇಂಗ್ಲೀಷ್ ಶಾಲೆಗಳಷ್ಟು ಚೆನ್ನಾಗಿರುವ ಕನ್ನಡ ಶಾಲೆಗಳನ್ನು ತೋರಿಸಿ. ಇಂದಿನ ಶಿಕ್ಷಣ ಪದ್ಧತಿ ಸರಿಯಾಗಿಲ್ಲ. ಪಾಠಗಳ ಹೊರೆ ಜಾಸ್ತಿ, ಪರೀಕ್ಷಾ ವಿಧಾನ ಸರಿ ಇಲ್ಲ. ಮುಂತಾಗಿ ದಾರಿ ತಪ್ಪಿಸುವ ಮಾತುಗಳನ್ನು ಆಡುತ್ತಾರೆ.

ಆದ್ದರಿಂದ ಕನ್ನಡದ ಜೊತೆಗೆ ಇಂಗ್ಲೀಷ್‌ನ್ನೂ ಸರಿಯಾಗಿ ಕಲಿಸುವುದಷ್ಟೇ ಆಗಬೇಕಾದ ಕೆಲಸ. ಅದಕ್ಕಾಗಿ ಮೂರನೆಯ ತರಗತಿಯಿಂದ ಇಂಗ್ಲೀಷ್‌ನ್ನು ಸರಿಯಾಗಿ ಕಲಿಸಿದರೆ ಸಾಕು. ಈ ಇಂಗ್ಲೀಷ್ ಕಲಿಕೆ ಬಳಕೆಯ ಭಾಷೆಯಾಗಿರಬೇಕು; ಮುಂದೆ ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯುಗಳನ್ನು ಓದಲು ಹಾಗೂ ಅರ್ಥಮಾಡಿಕೊಳ್ಳಲು ದಾರಿದೀಪವಾಗಿರಬೇಕು. ಈ ರೀತಿಯ ವ್ಯವಸ್ಥೆಯಿಂದ ಒಂದು ಹಂತದವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳು ಮುಂದೆ ಇಂಗ್ಲೀಷ್ ಮಾಧ್ಯಮಕ್ಕೆ ಬದಲಿಸಿಕೊಳ್ಳಬೇಕೆಂದರೆ ಸುಲಭ. ಕಲಿಕೆಯಲ್ಲಿ ಸ್ವಂತಿಕೆಯುನ್ನು ಬೆಳೆಸಿಕೊಂಡ, ವಿಷಯುಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಪಡೆದ ವಿದ್ಯಾರ್ಥಿಗಳು ಈ ಬದಲಾವಣೆಯಲ್ಲಿ ಯಾವ ತೊಡಕನ್ನೂ ಕಾಣಲಾರರು. ಇದು ನಾನು ಮತ್ತು ನನ್ನ ಅನೇಕಾನೇಕ ಮಿತ್ರರ ಮತ್ತು ನಮ್ಮ ಮಕ್ಕಳ ಅನುಭವ. ಇದೇ ನಮ್ಮ ಮಕ್ಕಳಿಗೆ ಅಗತ್ಯವಾದ ಸರಿಯಾದ ಶಿಕ್ಷಣ ವ್ಯವಸ್ಥೆ.

ಶಿಕ್ಷಣದಲ್ಲಿ ಮಾಧ್ಯಮವನ್ನು ಬದಲಿಸಿಕೊಳ್ಳಲು ಚುರುಕು ವಿದ್ಯಾರ್ಥಿಗಳಿಗೆ ಯಾವುದೇ ಹಂತವಾದರೂ ಸಮಸ್ಯೆಯೇ ಅಲ್ಲ. ಆದರೆ ಸಾಮಾನ್ಯ ನಿಯಮದ ದೃಷ್ಟಿಯಿಂದ ಒಂದು ಹಂತವನ್ನು ಗುರುತಿಸಬೇಕು. ಈಗಿನ ಜನಾಭಿಪ್ರಾಯ ಮತ್ತು ವಾಸ್ತವ ಸ್ಥಿತಿಯನ್ನು ಗಮನಿಸಿ ಕರ್ನಾಟಕದಲ್ಲಿ ಎಸ್. ಎಸ್. ಎಲ್. ಸಿ. ಅಥವಾ ಕನಿಷ್ಠ ೭ ನೆಯ ತರಗತಿಯವರೆಗಾದರೂಕನ್ನಡ ಮಾಧ್ಯಮ ಕಡ್ಡಾಯವಾಗಬೇಕು. ಶಾಲೆಗಳು ಇಂತಹ ವೈಜ್ಞಾನಿಕ ವಿಚಾರಗಳನ್ನು ಒಪ್ಪಿ ತಮ್ಮ ಶಾಲೆಗಳಲ್ಲಿ ಕನ್ನಡಕ್ಕೆ ಮುಕ್ತ ಅವಕಾಶವನ್ನು ನೀಡಬೇಕು. ಇದರ ಜೊತೆಗೆ ಅಲ್ಲಿ ಖಂಡಿತವಾಗಿಯೂ ಇಂಗ್ಲೀಷ್ ಅನ್ನು ಚೆನ್ನಾಗಿ ಹೇಳಿಕೊಡಲೇಬೇಕು. ಕೇವಲ ಇಂಗ್ಲೀಷ್ ಹುಚ್ಚಿನ ಕಿಚ್ಚಿನಿಂದ ಗ್ರಾಮೀಣ ಪ್ರದೇಶದ ಮಕ್ಕಳೂ ಸಹ ನಗರ ಪ್ರದೇಶದ ಮಕ್ಕಳಂತೆ ದಡ್ಡರಾಗುವ ದಿನಗಳು ಹತ್ತಿರ ಬರುತ್ತಿವೆ.

ಒಟ್ಟಿನಲ್ಲಿ ಇಂದಿನ ಮಕ್ಕಳು ಕನ್ನಡದಿಂದ ದೂರವಾಗುತ್ತಿದ್ದಾರೆ. ಇವರ ಬೌದ್ಧಿಕ ಮಟ್ಟ ಕಡಿಮೆಯಾಗುವ ಸಾಧ್ಯತೆಗಳು ಹೆಚ್ಚುತ್ತಿವೆ. ಕರ್ನಾಟಕದಲ್ಲೇ ಕನ್ನಡ ಮರೆಯಾಗುತ್ತಿದೆ. ಈ ಸಮಸ್ಯೆಗಳು ಯಾರಿಗೆ ಬೇಕು? ಈ ಸಮಸ್ಯೆಗಳನ್ನು ಯಾರು ಪರಿಹರಿಸುತ್ತಾರೆ? ಇದೇ ಈಗಿನ ಯಕ್ಷಪ್ರಶ್ನೆ.

(ಸಾಭಾರ–ಪ್ರಜಾವಾಣಿ)

ತಂದೆ ತಾಯಿಗಳ ಗಮನಕ್ಕೆ

-ಕ್ಲಾಡ್ ಮತ್ತು ನೋರ್ಮಾ ಆಳ್ವಾರಿಸ್

ಕೆಲ ಮಕ್ಕಳು ಮಾತ್ರ ಶಾಲೆಯನ್ನು ಇಷ್ಟಪಡುತ್ತಾರೆ. ಇನ್ನು ಬಹಳಷ್ಟು ಮಕ್ಕಳು ಇಷ್ಟಪಡುವುದಿಲ್ಲ. ಇಂದಿನ ಶಾಲಾ ಪದ್ಧತಿ ಮಕ್ಕಳಿಗೆ ಇಷ್ಟವಾಗಿಲ್ಲವೆಂಬ ಸಂಗತಿಯನ್ನು ಅನೇಕ ತಂದೆ ತಾಯಿಗಳು ಒಪ್ಪಬಹುದು. ಇದಕ್ಕೆ ಒಂದು ಉತ್ತಮ ಸೂಚನೆ ಮಕ್ಕಳು ಆರೋಗ್ಯ ಸರಿಯಿಲ್ಲವೆಂಬ ನೆಪ ಹೇಳುತ್ತ ಶಾಲೆಯನ್ನು ಎಷ್ಟು ಸಲ ಸಾಧ್ಯವೋ ಅಷ್ಟು ಸಲ ತಪ್ಪಿಸಿಕೊಳ್ಳಲು ಇಷ್ಟಪಡುತ್ತಾರೆಂಬುದು!. ಶಾಲೆಯ ಬಗ್ಗೆ ಇರುವ ಅರುಚಿಗೆ ಸಂಬಂಧಿಸಿದ ಇನ್ನೊಂದು ಒಳ್ಳೆಯ ಗುರುತು ಅಧ್ಯಾಪಕರಿಗೆ ಅಡ್ಡ ಹೆಸರನ್ನು ಕೊಡುವಂಥ ಮನೋಭಾವ ವಿದ್ಯಾರ್ಥಿಗಳಲ್ಲಿರುವಂಥದು. ಈ ಬಹಳಷ್ಟು ಅಡ್ಡ ಹೆಸರುಗಳು ತರಗತಿಯಧ್ಯಾಪಕರನ್ನು ಅಪಹಾಸ್ಯಕ್ಕೆ ಒಳಪಡಿಸಿರುತ್ತವೆ ಅಥವಾ ಅವರನ್ನು ಕುರಿತು ತಮಾಷೆ ಮಾಡುವಂಥಾದ್ದಾಗಿರುತ್ತವೆ. ಈ ಅಡ್ಡ ಹೆಸರುಗಳು ಅಧ್ಯಾಪಕರ ಒಟ್ಟಾರೆ ನಡವಳಿಕೆಯನ್ನೋ ಅಥವಾ ಅವರ ದೈಹಿಕ ಚರ್ಯೆಯನ್ನೋ ಸೂಚಿಸುತ್ತವೆ. ಶಾಲಾ ವಿದ್ಯಾಭ್ಯಾಸ ಕ್ರಮದ ಬಗ್ಗೆ ಇರುವ ಅರುಚಿಗೆ ಇನ್ನೊಂದು ಮಹತ್ವದ ಗುರುತೇನೆಂದರೆ ಅದು ಕಲಿಕೆಯನ್ನೇ ಪ್ರೋತ್ಸಾಹಿಸುವುದಿಲ್ಲ. ವಾಸ್ತವವಾಗಿ ಶಾಲಾಬೋಧನೆ ಪ್ರಾರಂಭವಾಗುತ್ತಲೇ ಕಲಿಕೆ ನಿಲುಗಡೆಗೆ ಬರುತ್ತದೆ. ಇದಕ್ಕೆ ಒಂದು ಉತ್ತಮ ಉದಾಹರಣೆ ಭಾಷಾ ಕಲಿಕೆ. ಮಕ್ಕಳು ಶಾಲೆಯ ಹೊರಗಿದ್ದಾಗ ಅನೇಕ ಭಾಷೆಗಳನ್ನು ಕಲಿತುಕೊಳ್ಳಬಲ್ಲರು. ಅಥವಾ ಶಾಲೆಗೆ ಹೋಗಲು ಪ್ರಾರಂಭ ಮಾಡುವ ಮೊದಲು ಕಲಿತುಕೊಳ್ಳಬಹುದು. ಆದರೆ ಆ ಭಾಷೆಗಳನ್ನು ಶಾಲೆಯಲ್ಲಿ ಅನೇಕ ವರ್ಷ ಕಲಿತನಂತರ ಬೇರೊಂದು ಭಾಷೆಯನ್ನು ಕಲಿಯಲು ಅವರು ಅಸಮರ್ಥರಾಗುತ್ತಾರೆ.

ಒಂದೆರಡು ಶತಮಾನಗಳ ಹಿಂದೆ ಶಾಲಾವಿದ್ಯಾಭ್ಯಾಸ ಮತ್ತು ಅಧ್ಯಾಪಕರು ಅಗತ್ಯವೆಂದು ಭಾವಿಸಲಾಗಿತ್ತು. ಏಕೆಂದರೆ ಆಗ ಅನೇಕ ತಂದೆ ತಾಯಿಗಳು ಶಿಕ್ಷಿತರಾಗಿರುತ್ತಿರಲಿಲ್ಲ. ಇಂದು ಬಹಳ ದೊಡ್ಡ ಸಂಖ್ಯೆಯಲ್ಲಿ ತಂದೆ ತಾಯಿಗಳು ಬಹಳ ಒಳ್ಳೆಯ ರೀತಿಯಲ್ಲಿ ಶಿಕ್ಷಣವನ್ನು ಪಡೆದಂತವರಾಗಿರುತ್ತಾರೆ. ಅನೇಕ ಬಾರಿ ತಮ್ಮ ಮಕ್ಕಳಿಗೆ ಕಲಿಸುವ ಅಧ್ಯಾಪಕರುಗಳಿಗಿಂತಲೂ ಹೆಚ್ಚು ಒಳ್ಳೆಯ ರೀತಿಯಲ್ಲಿ ತಂದೆ ತಾಯಿಗಳೇ ಸುಶಿಕ್ಷಿತರಾಗಿರುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಹೆಚ್ಚು ಕಲಿತಂಥವರು ತಮ್ಮ ಮಕ್ಕಳನ್ನು ಕಡಿಮೆ ಕಲಿತಂಥವರ ಬಳಿ ಶಿಕ್ಷಣಕ್ಕೆ ಏಕೆ ಕಳುಹಿಸಬೇಕೆಂಬುದು ಸ್ಪಷ್ಟವಾಗುತ್ತಿಲ್ಲ.

ಶಾಲೆಯ ಬಗ್ಗೆ ಇರುವ ಸಾಮಾನ್ಯವಾದ ಮನೋಭಾವ ವಿಮರ್ಶಾರಾಹಿತ್ಯವಾಗಿಯೇ ಇರುತ್ತದೆ. ಅಲ್ಲದೇ ಆ ಮನೋಭಾವ ಕಾರ್ಖಾನೆಗಳ ಬಗ್ಗೆ ಇರುವಂಥ ಮನೋಭಾವಕ್ಕೆ ಬಹಳ ಹತ್ತಿರವಾಗಿರುತ್ತದೆ. ಇವಾನ್ ಇಲ್ಲಿಚ್ ಒಂದು ಅದ್ಭುತವಾದ ಪುಸ್ತಕವನ್ನು ಬರೆದಿದ್ದಾರೆ. ಅದರ ಹೆಸರು (ಶಾಲಾರಹಿತ ಸಮಾಜವನ್ನು ನಿರ್ಮಿಸುವಿಕೆ) . ಇಂಗ್ಲೆಂಡಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿಯ ಸಮಯದಲ್ಲಿ ಕಾರ್ಖಾನೆಗಳು ಸ್ಥಾಪಿತಗೊಂಡವು. ಆಗ ಆ ಕಾರ್ಖಾನೆಗಳಲ್ಲಿ ಪ್ರತಿದಿನ ದೀರ್ಘ ಮತ್ತು ಬೇಸರ ತರಿಸುವಂಥ ಕೆಲಸವನ್ನು ಮಾಡುವುದಕ್ಕೆ ಸಹಜ ಪ್ರಕೃತಿಯ ವ್ಯಕ್ತಿಗಳನ್ನು ಪಡೆಯುವುದು ಕಾರ್ಖಾನೆಗಳ ಮಾಲೀಕರಿಗೆ ಕಷ್ಟವಾಗಿತ್ತು. ಮೊದಲು ಸ್ಥಾಪಿತಗೊಂಡ ಕಾರ್ಖಾನೆಗಳಿಗೆ ಅನಿವಾರ್ಯವಾಗಿ ಭಿಕ್ಷುಕರು ಮತ್ತು ಉಂಡಾಡಿಗಳಾದಂಥವರನ್ನು ಕೆಲಸಗಾರರನ್ನಾಗಿ ತೆಗೆದುಕೊಳ್ಳಬೇಕಾಗಿತ್ತು. ಒಂದು ವೇಳೆ ಅವರೇನಾದರು ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಒಪ್ಪದಿದ್ದಲ್ಲಿ ಅವರಿಗೆ ಕಾರಾಗೃಹದ ಭೀತಿಯನ್ನೂ ಒಡ್ಡಲಾಗುತ್ತಿತ್ತು.

ಇಂದಿಗೂ ಕೂಡ ನಮ್ಮ ದೇಶದಲ್ಲಿ ಮತ್ತು ಇತರ ಅನೇಕ ದೇಶಗಳಲ್ಲಿ ಎಲ್ಲಿ ಕೈಗಾರಿಕಾ ಸಂಸ್ಕೃತಿ, ಇನ್ನೂ ಪೂರ್ಣವಾಗಿ ಮೈದಾಳಿಲ್ಲವೊ ಅಂಥಲ್ಲಿ ಕೆಲಸಗಾರರ ಗೈರುಹಾಜರಾತಿ ದೊಡ್ಡ ಪ್ರಮಾಣದಲ್ಲಿಯೆ ಇರುತ್ತದೆ. ಮುಂಬಯಿಯಂಥ ನಗರಗಳಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ನೌಕರರು ತಮ್ಮ ಕೆಲಸಗಳನ್ನು ತೊರೆದು ತಮ್ಮ ಹಳ್ಳಿಗಳಿಗೆ ದೀರ್ಘಕಾಲದ ವಾಸಕ್ಕಾಗಿ ಹಿಂದಿರುಗುತ್ತಾರೆ. ಅಥವಾ ಕೆಲಸದಿಂದ ತಪ್ಪಿಸಿಕೊಳ್ಳುತ್ತಾರೆ. ಯಾರೇ ಆಗಲಿ ಒಂದು ಯಂತ್ರಕ್ಕೆ ಕಟ್ಟು ಬಿದ್ದು ಆ ಯಂತ್ರದ ಮೇಲೆ ಪ್ರತಿದಿನ ೮ ಘಂಟೆಗಳ ಕಾಲ ಕೆಲಸಮಾಡುವುದು ಮತ್ತು ಈ ದಿನಚರಿಯನ್ನೇ ಅನೇಕ ತಿಂಗಳು ಮತ್ತು ವರ್ಷಗಳ ಕಾಲ ಅನುಸರಿಸುವುದು ಅಮಾನವೀಯವಾಗಿರುತ್ತದೆಂದು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಗೊತ್ತಾಗುತ್ತದೆ. ಯಾವುದೇ ಒಬ್ಬ ಸಾಮಾನ್ಯ ಪ್ರಕೃತಿಯ ವ್ಯಕ್ತಿ ಇಂಥ ಅಮಾನವೀಯ ಜೀವನದ ವಿರುದ್ಧ ಯಾವುದೋ ಒಂದು ಹಂತದಲ್ಲಿ ಪ್ರತಿಭಟಿಸಿಯೇ ತೀರುತ್ತಾನೆ. ಅಂಥ ಜೀವನ ಕ್ರಮ ಯಂತ್ರದ ಮಾಲೀಕನಾದ ಬಂಡವಾಳಸ್ಥನಿಗೆ ಒಳ್ಳೆಯದಾಗಿರಬಹುದು. ಆದರೆ ಆ ಪ್ರಕಾರದ ಜೀವನ ಕೆಲಸಗಾರನ ಜೀವನವನ್ನು ಪರಿಪೂರ್ಣ ಮಾಡಲು ಹೇಗೆ ನೆರವಾಗುತ್ತದೆ? ಬೇರೆ ಯಾರದೋ ಉದ್ದೇಶಗಳಿಗಾಗಿ ದಾಸನಾಗಿ ಕೆಲಸ ಮಾಡಬೇಕೆಂದು ದೇವರು ಜನರಿಗೆ ಜೀವನವೆಂಬ ಅಮೂಲ್ಯವಾದ ಕಾಣಿಕೆಯನ್ನು ಕೊಟ್ಟಿಲ್ಲ. ಅದೇ ರೀತಿ ಸೃಜನಶೀಲಾತ್ಮಕವಾದ ಕಲ್ಪನಾಶಕ್ತಿಯನ್ನು ಕೊಟ್ಟಿಲ್ಲ. ಇಂದಿನ ಶಾಲಾ ವಿದ್ಯಾಭ್ಯಾಸವು ಕಾರ್ಖಾನೆಯಲ್ಲಿಯ ಉತ್ಪಾದನ ಕ್ರಮದೊಂದಿಗೆ ಎಷ್ಟು ನಿಕಟವಾಗಿ ಹೋಲುತ್ತದೆಂಬುದನ್ನು ತಿಳಿಯಬೇಕಾದರೆ ಅಪಾಯದ ಶಾಲೆ(Danger School) ಎಂಬ ಪುಸ್ತಕವನ್ನು ಓದಬೇಕು.

ಇನ್ನು ಶಾಲೆಯ ಬಗೆಗಿನ ನಮ್ಮ ಚರ್ಚೆಗೆ ಹಿಂದಿರುಗುವುದಾದರೆ ಶಾಲಾಭ್ಯಾಸ ಮುಕ್ತಾಯವಾದ ನಂತರವೇ ಕಲಿಕೆ ಪ್ರಾರಂಭವಾಗುತ್ತದೆಂದು ನಾವು ಧಾರಾಳವಾಗಿ ಹೇಳಬಹುದು. ಅಥವಾ ಇನ್ನೂ ಉತ್ತಮವಾಗಿ ಹೇಳಬೇಕೆಂದರೆ ಶಾಲಾ ವಿದ್ಯಾಭ್ಯಾಸಕ್ಕೆ ತಡೆವುಂಟಾದಾಗಲೇ ಕಲಿಕೆಯು ವೇಗವನ್ನು ಪಡೆಯುತ್ತದೆ. ಬಹಳಷ್ಟು ಜನ ಶಾಲಾ ವಿದ್ಯಾಭ್ಯಾಸವನ್ನು ಶಾಶ್ವತವಾದ ಮತ್ತು ವೇಗಗತಿಯ ಕಲಿಕೆಗೆ ಪ್ರಯೋಜನವಾಗುವಂತೆ ಬದಲಾಯಿಸಲು ಅಸಮರ್ಥರಾಗಿದ್ದಾರೆ. ಅಂಥ ಕಲಿಕೆ ಪ್ರಾರಂಭವಾಗುವುದು ಶಾಲೆಯಿಂದ ಅನಾಮತ್ತಾಗಿ ಬೇರೆಯಾದಾಗಲೇ. ನಾವು ನಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಅದೇ ಒಂದು ಅತ್ಯುತ್ತಮ ಮಾರ್ಗವೆಂಬುದಕ್ಕಲ್ಲ.ಆದರ್ಶಾತ್ಮಕವಾಗಿ ಮಕ್ಕಳಿಗೆ ನಾವೇ ಕಲಿಸುವುದರಲ್ಲಿ ಸಂತೋಷಪಡುತ್ತೇವೆ. ಈ ರೀತಿ ತಮ್ಮ ಮಕ್ಕಳಿಗೆ ತಾವೇ ಪಾಠ ಮಾಡುವಂಥ ಅನೇಕ ಕುಟುಂಬಗಳು ನಮಗೆ ಗೊತ್ತಿವೆ. ಆದರೆ ಅದೇ ರೀತಿ ನಾವು ಮಾಡಲಾಗದೆ ಮಕ್ಕಳನ್ನು ಶಾಲಾಸಂಸ್ಕೃತಿಗೆ ಸೀಮಿತಗೊಳಿಸಿದ್ದೇವೆ. ನಮ್ಮ ಮಕ್ಕಳನ್ನು ತರಗತಿಯಲ್ಲಿ ಮೇಲ್ದರ್ಜೆಯಲ್ಲಿಡ ಬೇಕೆಂಬುದಾಗಿರುತ್ತದೆ. ಅಥವಾ ಅವರು ತಮ್ಮ ಸಹಪಾಠಿಗಳನ್ನು ಹಿಂದಕ್ಕೆ ಹಾಕಬೇಕೆಂಬುದಾಗಿರುತ್ತದೆ. ಶಾಲೆಯಲ್ಲಿ ವಿದ್ಯಾರ್ಥಿ ಹೊಂದಿರುವ ವಿಷಯಗಳಲ್ಲಿಯ ಮೇಧಾವಿತನ ಮೂಲತಃ ಉರುಹೊಡೆಯುವುದರಲ್ಲಿಯ ಮೇಧಾವಿತನವಾಗಿರುತ್ತದೆ. ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವುದು ಆ ವಿದ್ಯಾರ್ಥಿ ಮೇಧಾವಿಯಾಗಿದ್ದಾನೆಂದಾಗಲೀ ಅಥವಾ ವಿಷಯದಲ್ಲಿ ಆಸಕ್ತಿವುಳ್ಳವನೆಂದಾಗಲಿ ಅರ್ಥವಲ್ಲ ಆದರೂ ಸಹ ನಮ್ಮ ಮಕ್ಕಳು ತಮ್ಮ ಶಕ್ತಿ ಮೀರಿ ಸಾಧಿಸಬೇಕೆಂದು ನಾವು ಅವರಿಗೆ ಪ್ರೋತ್ಸಾಹಿಸುತ್ತೇವೆ. ಇಂದಿನ ಶಿಕ್ಷಣವು ಬಾಹ್ಯ ಜಗತ್ತನ್ನು ಎದುರಿಸುವಲ್ಲಿ ಮಕ್ಕಳನ್ನು ಸಮರ್ಥರನ್ನಾಗಿ ಮಾಡುವ ಬದಲು ಇಂದಿನ ಪದ್ಧತಿ ಅವರ ಇಚ್ಛೆಗಳನ್ನು ನಿಯಂತ್ರಿಸುತ್ತದೆ. ಮತ್ತು ಆರ್ಥಿಕ ಪರಿಸ್ಥಿತಿಗಳಿಗೆ ತಲೆಬಾಗುವಂತೆ ಒತ್ತಾಯಿಸುತ್ತದೆ. ನಮ್ಮ ಮಗ ರಾಹುಲನಿಗೆ ಶಾಲಾಭ್ಯಾಸವು ಒಂದು ಬೇಸರದ ಕೆಲಸವೆಂದು ಅನಿಸುತ್ತಿದೆ ಎಂದು ನಮಗೆ ಗೊತ್ತಾಯಿತು. ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ತಾನು ತೇರ್ಗಡೆಯಾಗ ಬೇಕಾಗಿದೆಯೆಂಬುದರ ಬಗ್ಗೆ ಅವನಿಗೆ ತಿಳುವಳಿಕೆಯಿದೆಯೆಂದೂ ನಮಗೆ ಗೊತ್ತಾದ ಕೂಡಲೆ ಈ ಸಮಸ್ಯೆಗೆ ನಾವು ಒಂದು ಒಳ್ಳೆಯ ಉಪಾಯವನ್ನು ಕಂಡು ಹಿಡೆದೆವು. ಅವನು ೯ ನೇ ತರಗತಿಯಲ್ಲಿದ್ದಾಗ ನಾವು ಅವನಿಗೆ ಒಂದು ಸಲಹೆಯನ್ನು ಕೊಟ್ಟೆವು. ಅವನು ಆ ಪರೀಕ್ಷೆಯಲ್ಲಿ ಮೊದಲನೆ ದರ್ಜೆಯಲ್ಲಿ ತೇರ್ಗಡೆ ಆದಲ್ಲಿ ನಾವು ಅವನಿಗೆ ಶಾಲಾವಿದ್ಯಾಭ್ಯಾಸದಿಂದ ಕೆಲಕಾಲ ರಜೆ ತೆಗೆದುಕೊಳ್ಳಲು ಅವಕಾಶ ಕೊಡುವುದಾಗಿ ತಿಳಿಸಿದೆವು! ಇಂಥ ಒಂದು ಸಲಹೆಯನ್ನು ನಾವು ಕೊಟ್ಟದ್ದನ್ನು ಅವನು ನಂಬಲಾಗದಷ್ಟು ಆಶ್ಚರ್ಯಗೊಂಡಿದ್ದನು. ರಾಹುಲ್ ಮೊದಲನೇ ದರ್ಜೆಯಲ್ಲಿ ಪಾಸಾದುದಷ್ಟೇ ಅಲ್ಲ ರ್‍ಯಾಂಕ್ ಸಹ ಪಡೆದನು. ಹೀಗೆ ರಾಹುಲ್ ತನ್ನ ಮಧ್ಯಂತರವಧಿಯ ರಜೆಯನ್ನು ಸಂಪಾದಿಸಿಕೊಂಡನು. ಈ ಒಂದು ವರ್ಷದ ರಜಾ ಅವಧಿಯಲ್ಲಿ ಅವನು ತನ್ನ

ಬಹು ಇಷ್ಟವಾದ ಯಾವುದೇ ವಿಷಯದಲ್ಲಿ ಏನನ್ನಾದರೂ ಮಾಡಲು ಅವನನ್ನು ಪ್ರೋತ್ಸಾಹಿಸಿದೆವು. ಆದರೆ ಇದಕ್ಕೆ ಆಗುವ ಖರ್ಚು ಒಂದು ಸಾಮಾನ್ಯ ಮಧ್ಯಮವರ್ಗದ ಕುಟುಂಬ ನಿರ್ವಹಿಸಬಹುದಾದಷ್ಟು ಇರಬೇಕೆಂಬ ನಿಯಮಕ್ಕನುಗುಣವಾಗಿ ರಾಹುಲನಿಗೆ ಈ ಸ್ವಾತಂತ್ರ್ಯವನ್ನು ಕೊಟ್ಟೆವು.

ಅವನು ಶಾಲೆಯಿಂದ ರಜೆ ಪಡೆದ ವರ್ಷದ ಅವಧಿಗೆ ಸಂಬಂಧಿಸಿದಂತೆ ಎರಡು ನಿಯಮಗಳನ್ನು ಅವನಿಗೆ ಸೂಚಿಸಿದೆವು. ಒಂದು, ಪ್ರತಿದಿನದ ಅನುಭವವನ್ನು ದಿನಚರಿಯಲ್ಲಿ ಬರೆಯಬೇಕು. ಮತ್ತು ಎರಡನೆಯದು ವರ್ಷದ ಕೊನೆಯಲ್ಲಿ ವಿಶೇಷ ಕಾರ್ಯವರದಿಯನ್ನು ಬರೆಯಬೇಕು. ಅದರಲ್ಲಿ ಅವನು ನೋಡಿದ ಘಟನೆಗಳು ಮತ್ತು ಅನುಭವಗಳು ನಮೂದಿತವಾಗಿರಬೇಕು. ಈ ನಿಯಮಗಳು ಒಂದು ಶಿಸ್ತನ್ನು ಪಾಲಿಸಲು ಅವನಿಗೆ ನೆರವಾಗುವು ಎಂದು ನಾವು ಭಾವಿಸಿದ್ದೆವು. ಶಿಸ್ತೆ ಎಲ್ಲ ಕಲಿಕೆಗೆ ಅಗತ್ಯ.

ಇನ್ನೊಂದು ವಿಷಯದ ಬಗ್ಗೆಯೂ ರಾಹುಲನಿಗೆ ಮನವರಿಕೆ ಮಾಡಿಕೊಟ್ಟೆವು. ಅವನು ಒಂದು ನಿರ್ದಿಷ್ಟ ಚಟುವಟಿಕೆಯನ್ನು ಕೈಗೆತ್ತಿ ಕೊಳ್ಳಲು ತೀರ್ಮಾನಿಸಿದ ಮೇಲೆ ಅದನ್ನು ಮುಗಿಸಿಯೇ ತೀರಬೇಕೆಂಬ ಬದ್ಧತೆಯನ್ನು ಅವನು ಬೆಳೆಸಿಕೊಳ್ಳಬೇಕು. ಆ ಚಟುವಟಿಕೆ ಬೇಸರತರಿಸುತ್ತದೆಂಬ ಒಂದೇ ಕಾರಣಕ್ಕಾಗಿ ಅದನ್ನು ಬಿಡುವಹಾಗಿಲ್ಲ.

ಪ್ರತಿ ದಿನ ಪ್ರಬಂಧ ಬರೆಯುವ ಮತ್ತು ದಿನಚರಿ ಬರೆಯುವ ಪದ್ಧತಿ ಹಲವಾರು ರೀತಿಯಲ್ಲಿ ಅವನಿಗೆ ಉಪಯೋಗಕಾರಿ ಎಂದು ಸಿದ್ಧವಾಯಿತು ಅಲ್ಲದೆ, ಅದು ತನ್ನ ಅನುಭವಗಳನ್ನು, ಅಭಿಪ್ರಾಯಗಳನ್ನು, ನೋಡಿದ ಸಂಗತಿಗಳನ್ನು ಮತ್ತು ತಾನು ಮಾಡುತ್ತಿರುವ ಕೆಲಸದ ಬಗೆಗಿನ ವಿಚಾರಗಳನ್ನು ಹಾಗೂ ಮುಂದೆ ಮಾಡಬೇಕೆಂದಿರುವ ಬಗೆಗಿನ ವಿಚಾರಗಳನ್ನು ಕಡ್ಡಾಯವಾಗಿ ದಾಖಲಿಸುವಂತೆ ಮಾಡಿತು. ನಾವು ಗಮನಿಸಿದಂತೆ ಜೂನ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಅವನು ಕೈಗೊಂಡ ತೀರ್ಮಾನಗಳು ನಿಧಾನವಾಗಿದ್ದವು. ಮತ್ತು ಬಹಳ ಸಮಯದ ಅಂತರವನ್ನು ಹೊಂದಿದ್ದವು. ಆದರೆ ಜನವರಿಯಿಂದ ಏಪ್ರಿಲ್‌ವರೆಗಿನ ಅವಧಿಯಲ್ಲಿ ಅವನು ತನ್ನ ಬಳಿ ಇದ್ದ ಸಮಯದ ಉಪಯೋಗವನ್ನು ಕುರಿತು ತೀವ್ರವಾಗಿ ಆಲೋಚಿಸುವುದರಲ್ಲಿ ರಾಹುಲ್ ಸಮರ್ಥನಾಗಿದ್ದ ಮತ್ತು ಉಳಿದಿರುವಂಥ ಸಮಯದಲ್ಲಿಯೇ ಇನ್ನೂ ಹೆಚ್ಚಿನ ಅನುಭವಗಳನ್ನು ಪಡೆಯುವ ಸಾಧ್ಯತೆಗಳನ್ನು ಕುರಿತು ಆಲೋಚಿಸಲು ಸಮರ್ಥನಾದ. ಶಾಲೆಯಿಂದ ಬಿಡುಗಡೆಯಾಗಿದ್ದ ಈ ಸಮಯವನ್ನು ಅತ್ಯಂತ ಹೆಚ್ಚು ಪ್ರಯೋಜನಕಾರಿಯಾಗಿ ಬಳಸಿಕೊಳ್ಳಲು ಅವನು ಉತ್ಸುಕನಾಗಿದ್ದ. ಹದಿನಾರು ವರ್ಷದ ಓರ್ವ ಬಾಲಕನ ದೃಷ್ಟಿಯಿಂದ ಇದೆಲ್ಲವೂ ಬಹಳ ಅದ್ಭುತ ಸಾಧನೆಗಳಾಗಿದ್ದವು. ಈ ಶಿಸ್ತನ್ನು ಅವನು ಸಾಧಿಸುವವರೆಗೆ ನಾವು ಎಲ್ಲದಕ್ಕೂ ಅವನನ್ನು ಮುದ್ದು ಮಾಡುತ್ತಿದ್ದೆವು.

ಅವನು ದಿನಚರಿಯನ್ನಿಟ್ಟುಕೊಂಡು ಬಂದಿದ್ದು ಒಳ್ಳೆಯದಾಯಿತು. ಆ ದಿನಚರಿಯು ಅನಿತಾ ಪಿಂಟೋರ ಮಾರ್ಗದರ್ಶನದಲ್ಲಿ ಪೂರ್ಣಪ್ರಮಾಣದ ಪುಸ್ತಕರೂಪದಲ್ಲಿ ಪರಿವರ್ತಿತಗೊಂಡಿತು. ಆಧುನಿಕ ಶಾಲಾಶಿಕ್ಷಣ ತರುವಂಥ ಒತ್ತಡಗಳು ಬಹಳಷ್ಟಿವೆ ಮತ್ತು ಸತತವಾಗಿವೆ. ಹತ್ತು ವರ್ಷಗಳ ಏಕತಾನತೆಯ ಪರೀಕ್ಷಾ ಪದ್ಧತಿ ಮಗುವಿನ ತಲೆಯ ಮೇಲೆ ಭಾರವಾಗಿ ಕುಳಿತ್ತಿರುತ್ತದೆ. ಈ ಹತ್ತು ವರ್ಷಗಳ ಅವಧಿಯಲ್ಲಿ ವಿದ್ಯಾರ್ಥಿಗಳು ಬಹಳ ದೊಡ್ಡ ಪ್ರಮಾಣದಲ್ಲಿ ಮಾಹಿತಿಗಳನ್ನು ಏಕೆ ಹೊಂದಿರಬೇಕು. ಮತ್ತು ಅದನ್ನು ಏಕೆ ಜೀರ್ಣಿಸಿಕೊಂಡಿರಬೇಕು ಎಂಬುದರ ಬಗ್ಗೆ ಕಾರಣಗಳು ಇರುವುದಿಲ್ಲ ಆ ರೀತಿ ಸಂಗ್ರಹಿಸಿದ ಮಾಹಿತಿ ಅಜೀರ್ಣವಾಗಿರುತ್ತದೆಂಬುದು ಪರೀಕ್ಷೆಗಳಲ್ಲಿ ವಿದ್ಯಾರ್ಥಿ ಅದನ್ನು ವಾಂತಿಮಾಡಿಕೊಳ್ಳುತ್ತಾನೆಂಬ ಸಂಗತಿಯಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ಪರೀಕ್ಷಾನಂತರ ಅದೆಲ್ಲವನ್ನೂ ಮರೆಯುತ್ತಾನೆ. ಹತ್ತನೇ ತರಗತಿಯ ವಿದ್ಯಾರ್ಥಿ ಅವನು ಪಾಸಾದ ಕೂಡಲೇ ಯಾವ ವಿಷಯವನ್ನು ಅಭ್ಯಾಸಿಸಬೇಕೆಂದು ತೀರ್ಮಾನಿಸಬೇಕಾಗುತ್ತದೆ. ಹಾಗೆ ತನ್ನ ಆಯ್ಕೆಯ ವಿಷಯವನ್ನು ತೀರ್ಮಾನಿಸುವಾಗ ಆ ವಿದ್ಯಾರ್ಥಿಗೆ ಅವನ ಇಷ್ಟ ಹಾಗೂ ಸಾಮರ್ಥ್ಯ ಇತ್ಯಾದಿಗಳ ಬಗ್ಗೆ ಯಾವ ಕಲ್ಪನೆಯೂ ಇರುವುದಿಲ್ಲ. ಅನೇಕ ಬಾರಿ ವಿಷಯದ ಆಯ್ಕೆಯನ್ನು ವಿದ್ಯಾರ್ಥಿ ಮಾಡುವುದಿಲ್ಲ. ಬದಲಿಗೆ ಅವನ ಮಹತ್ವಾಕಾಂಕ್ಷಿ ತಂದೆ ತಾಯಿಗಳೆ ಮಾಡಿರುತ್ತಾರೆ. ಅವನನ್ನು ಇಂಜನಿಯರಿಂಗ್ ಅಥವಾ ವೈದ್ಯಕೀಯದಂಥ ಹಣ ಸಂಪಾದನೆಯ ಒಂದಲ್ಲ ಒಂದು ವೃತ್ತಿಗೆ ತಳ್ಳುತ್ತಾರೆ. ಹೀಗೆ ವಿದ್ಯಾರ್ಥಿ ವಿಷಯವನ್ನು ಬಲವಂತವಾಗಿ ಆಯ್ಕೆ ಮಾಡಿಕೊಂಡಾದ ನಂತರ ಕೆಲವು ವರ್ಷಗಳಾದ ಮೇಲೆ ಆ ವಿದ್ಯಾಭ್ಯಾಸ ತನಗೆ ಇಷ್ಟವಿಲ್ಲವೆಂದು ಅವನಿಗೆ ಗೊತ್ತಾಗುವ ವೇಳೆಗೆ ಬಹಳಷ್ಟು ಕಾಲ ಕಳೆದಿರುತ್ತದೆ. ಅವನು ವಿಷಯವನ್ನು ಬದಲಾಯಿಸುವುದಕ್ಕೆ ಸಾಧ್ಯವಾಗದಷ್ಟು ತಡವಾಗಿರುತ್ತದೆ. ಶಾಲೆಯಿಂದ ಒಂದು ವರ್ಷದ ಮಟ್ಟಿಗೆ ವಿದ್ಯಾರ್ಥಿಗೆ ಬಿಡುವು ಕೊಡುವುದರಿಂದ ಅವನಿಗೆ ಉಸಿರಾಡಲು ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ. ಮತ್ತು ಸ್ವಂತ ಪ್ರಯೋಗಾತ್ಮಕ ಅನುಭವದ ಮೂಲಕ ಅವನು ಎಲ್ಲವನ್ನೂ ತಿಳಿದು ವಿಷಯವನ್ನು ಆಯ್ಕೆಮಾಡಲು ಸಮರ್ಥನಾಗುತ್ತಾನೆ.

ಭಾರತೀಯ ಸಂಸ್ಕೃತಿಯನ್ನು ಬೆಳಗಿಸುತ್ತಿರುವ ಮಕ್ಕಳು

–ಸುರೇಂದ್ರಕೌಲಗಿ.

ಭಾರತ ವಿಶ್ವದಲ್ಲಿಯೆ ಅತ್ಯಂತ ಪುರಾತನವಾದ ಸಂಸ್ಕೃತಿಯನ್ನು ಹೊಂದಿದೆ. ಈ ಸಂಸ್ಕೃತಿಯನ್ನು ನಿರ್ಮಿಸಲು ಕೇವಲ ಋಷಿಮುನಿಗಳು, ವೇದ ಉಪನಿಷತ್‌ಗಳು, ರಾಮಾಯಣ ಮಹಾಭಾರತಗಳು ಮಾತ್ರ ಕಾರಣವಲ್ಲ. ಈ ಪುರಾತನ ಸಂಸ್ಕೃತಿಯ ನಿರ್ಮಾಣದಲ್ಲಿ ಹಲವಾರು ಮಕ್ಕಳು ಸಹ ಕಾರಣರಾಗಿದ್ದಾರೆಂಬುದು ನಮ್ಮೆಲ್ಲರಿಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಆ ಮಕ್ಕಳು ಉನ್ನತ ವಿಚಾರದಿಂದ ಕೂಡಿದವರಾಗಿ ಹಿರಿಯರಿಗೆ ಮಾರ್ಗದರ್ಶಕರಾಗುವಂಥ ತತ್ವಜ್ಞಾನವನ್ನು ತಿಳಿಸಿದ್ದಾರೆಂಬುದು ಇನ್ನೂ ಹೆಚ್ಚಿನ ಹೆಮ್ಮೆಯ ಸಂಗತಿ. ಬಹುಶಃ ಇಂಥ ಆದರ್ಶ ಪ್ರಾಯ ಮತ್ತು ಜ್ಞಾನದ ಔನ್ನತ್ಯವನ್ನು ಮುಟ್ಟಿದಂಥ ಮಕ್ಕಳನ್ನು ಪಡೆದ ದೇಶ ಭಾರತವಲ್ಲದೆ ಬೇರೊಂದಿರಲಾರದು. ಮಹಾಚೇತನವುಳ್ಳ ಈ ಮಕ್ಕಳು ತಮ್ಮ ಜ್ಞಾನವನ್ನು ಪ್ರಕೃತಿಯಿಂದ, ಹಿರಿಯರಿಂದ ಮತ್ತು ತಮ್ಮ ಸ್ವ ಉಜ್ವಲ ಚಿಂತನಾಕ್ರಮದಿಂದ ಪಡೆದರೆಂಬುದು ವಿಶೇಷ ಸಂಗತಿಯಾಗಿದೆ. ಈ ಮಕ್ಕಳು ಪಡೆದಂಥ ಜ್ಞಾನ ಕೃತಕವಾದ ಸನ್ನಿವೇಶದಲ್ಲಿ ಪಡೆದಂಥದಲ್ಲ. ವಿಶಿಷ್ಟವಾದ ಪರಿಸ್ಥಿತಿಯಲ್ಲಿ ವಿಶಿಷ್ಟವಾದ ರೀತಿಯಲ್ಲಿ ಬಹಳ ತ್ಯಾಗ, ಕಷ್ಟ ಮತ್ತು ಮನೋ ನಿಗ್ರಹದಿಂದ ಪಡೆದುದಂತಾಗಿತ್ತು. ಅವರು ಜ್ಞಾನವನ್ನು ಕೇವಲ ತಮ್ಮ ಆತ್ಮೋದ್ಧಾರಕ್ಕೆ ಮಾತ್ರ ಪಡೆಯದೇ ಇಡೀ ಮಾನವಕುಲದ ಉದ್ಧಾರಕ್ಕಾಗಿ ಪಡೆದರು. ಮತ್ತು ತಾವು ಪಡೆದ ಆ ವಿದ್ಯೆಯನ್ನು ಬಹಿರಂಗಗೊಳಿಸಿದರು ಆದ್ದರಿಂದಲೇ ಅವರು ಸದಾಕಾಲ ಭಾರತೀಯ ಸಂಸ್ಕೃತಿಯನ್ನು ಬೆಳಗಿಸುತ್ತಿರುವ ಮಕ್ಕಳಾಗಿದ್ದಾರೆ ಅವರು ಬೋಧಿಸಿದ ಜ್ಞಾನ ಸನಾತನವಾಗಿ ಉಳಿಯುವಂತಾದ್ದಾಗಿರುತ್ತದೆ. ಹಿರಿಯರೆಂಬುವುರೆಲ್ಲರು ಈ ಕಿರಿಯರ ಜ್ಞಾನದಿಂದ ಪ್ರಭಾವಿತರಾಗಬೇಕಾದಂಥ ಪ್ರಸಂಗ ಬರುತ್ತಿರುವುದರಿಂದಲೇ ಈ ಮಕ್ಕಳ ಹಿರಿಮೆ ಗರಿಮೆಗಳು ಪ್ರಕಾಶಿಸುತ್ತಿವೆ. ಈ ಮಕ್ಕಳ ನಾಮಾವಳಿಯ ಉಚ್ಚಾರಣೆಯೆ ಎಂತವರನ್ನೂ ಪುನೀತಗೊಳಿಸುತ್ತದೆ. ಅಂಥ ತೇಜೋಮಯ ಮಕ್ಕಳ ಸಂಕ್ಷಿಪ್ತ ಪರಿಚಯ ಇಲ್ಲಿದೆ. ಮೊದಲು ಆ ದಿವ್ಯ ಭವ್ಯ ಮಕ್ಕಳ ನಾಮಾವಳಿಯನ್ನು ಪಠಿಸೋಣ. ಅಷ್ಟಾವಕ್ರ, ನಚಿಕೇತ, ಅಭಿಮನ್ಯು, ಧ್ರುವ, ಪ್ರಹ್ಲಾದ, ಸತ್ಯಕಾಮ ಭೀಮ್ ಮೋಹನ.

ಅಷ್ಟಾವಕ್ರ

ಈ ಬಾಲಕ ೮ ಭಾಗಗಳಲ್ಲಿ ವಕ್ರತೆಯುಳ್ಳವನಾಗಿದ್ದರಿಂದ ಇವನಿಗೆ ಅಷ್ಟಾವಕ್ರ ಎಂಬ ಹೆಸರು ಬಂದಿತು. ಈತನು ಅಂಗವಿಕಲನಾಗಿದ್ದರೂ ಸಹ ಜ್ಞಾನದಲ್ಲಿ ಪ್ರಚಂಡನಾಗಿದ್ದನು. ಇವನ ಜ್ಞಾನದ ಪ್ರಕಾಂಡತೆ ಎಷ್ಟಿತ್ತೆಂದರೆ ತನ್ನ ತಂದೆಯ ಅಧ್ಯಯನ ಕ್ರಮವನ್ನೇ ಪ್ರಶ್ನಿಸುವಷ್ಟಾಗಿತ್ತು. ಆದರೆ ಈ ಬಾಲಕನ ದುರ್ದೈವವೆಂದರೆ ಇವನ ಜ್ಞಾನವೆ ಇವನ ತಂದೆಯು ಇವನಿಗೆ ಕೋಪಾವೇಶದಲ್ಲಿ ಅಷ್ಟಾವಕ್ರನ್ನಾಗಿ ಹುಟ್ಟುವಂತೆ ಶಾಪ ಕೊಡುವಂತಾಯಿತು. ಈತನಿಗೆ ಜನಕರಾಜನ ಯಾಗಶಾಲೆಯಲ್ಲಿ

ಪ್ರವೇಶ ದೊರೆಯದೆ ಇದ್ದಾಗ ಮತ್ತು ಜನಕನ ಆಸ್ಥಾದಲ್ಲಿದ್ದ ಪ್ರಕಾಂಡ ಪಂಡಿತ ವಂದಿಯನ್ನು ಸೋಲಿಸಲು ಅವಕಾಶ ದೊರೆಯದೆ ಇದ್ದಾಗ ಈತನು ಜನಕನಿಗೆ ಹೇಳಿದ ಈ ಮಾತುಗಳು ಯಾವುದೇ ವಿದ್ಯಾರ್ಥಿಗೆ ಆದರ್ಶಪ್ರಾಯವಾಗಿವೆ. "ನಾನು ವ್ರತಗಳನ್ನು ನಿಯಮದಿಂದ ಮಾಡಿ ಮುಗಿಸಿರುತ್ತೇನೆ. ವೇದ ವೇದಾಂತಗಳನ್ನು ಅಧ್ಯಯನ ಮಾಡಿ ವೇದ ಪ್ರಭಾವದಿಂದಲೂ ಕೂಡಿದವನಾಗಿದ್ದೇನೆ. ಮೇಲಾಗಿ ನಾನು ನನ್ನ ಗುರು ಜನರ ಶುಶ್ರೂಷೆಯಲ್ಲಿ ನಿರತನಾಗಿದ್ದೇನೆ. ಜಿತೇಂದ್ರಿಯನಾಗಿದ್ದೇನೆ. ಜ್ಞಾನ ಯೋಗದಲ್ಲಿಯೂ ಪ್ರಾವಿಣ್ಯವನ್ನು ಹೊಂದಿದವನಾಗಿದ್ದೇನೆ. ನಾನು ನಿನ್ನ ಕಣ್ಣಿಗೆ ಚಿಕ್ಕವನಾಗಿ ಕಂಡ ಮಾತ್ರಕ್ಕೆ ನೀನು ನಮ್ಮನ್ನು ಉಪೇಕ್ಷಿಸಬಾರದು ಅಗ್ನಿಯ ಕಣವು ಎಷ್ಟೆ ಚಿಕ್ಕದಾಗಿದ್ದರೂ ಅದನ್ನು ಮುಟ್ಟಿದೊಡನೆಯೆ ಮುಟ್ಟಿದವನನ್ನು ಸುಡುತ್ತದೆಯಲ್ಲವೆ?" ಇತ್ಯಾದಿ ಬುದ್ಧಿಪೂರಕವಾದ ಮತ್ತು ಸಂಗತವಾದ ಮಾತುಗಳನ್ನು ಹೇಳಿ ಒಳಗೆ ಪ್ರವೇಶ ಪಡೆದವನು ಮತ್ತು ವಂದಿಯನ್ನು ವಾದದಲ್ಲಿ ಸೋಲಿಸಿ ಅವನಿಗೆ ತಕ್ಕ ಶಾಸ್ತಿಯನ್ನು ಮಾಡಿದನು. ಅಷ್ಟಾವಕ್ರನು ಇಂದಿನ ವಿದ್ಯಾರ್ಥಿಗಳಿಗೆ ಅಧ್ಯಯನಶೀಲತೆಯಲ್ಲಿಯೂ, ಲೋಕವ್ಯವಹಾರದಲ್ಲಿಯೂ ಆದರ್ಶಪ್ರಾಯವಾಗಿದ್ದಾನೆ.

ನಚಿಕೇತ

ನಚಿಕೇತನು ಬಾಲಋಷಿ ಎಂಬ ಖ್ಯಾತಿಗೆ ಒಳಪಟ್ಟ ವಿಶಿಷ್ಟ ಜ್ಞಾನಿ ಬಾಲಕ. ಇವನು ಆಯ್ಕೆ ಮಾಡಿಕೊಂಡಿದ್ದ ಗುರು ಸಾಮಾನ್ಯನಲ್ಲ. ಅಸಾಮಾನ್ಯವಾದ ಗುರುವನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅಸಾಮಾನ್ಯವಾದ ವಿದ್ಯಾರ್ಥಿಯೆ ಬೇಕಾಗುತ್ತದೆ. ನಚಿಕೇತನ ಜೀವನದಲ್ಲಿ ಇಂಥ ಅಪೂರ್ವವಾದ ಜೋಡಿಯನ್ನು ಕಾಣುತ್ತೇವೆ. ನಚಿಕೇತ ಆರಿಸಿಕೊಂಡಿದ್ದ ಗುರು ಸಾಕ್ಷಾತ್ ಯಮಧರ್ಮರಾಯ. ಈ ಗುರುವಿನಿಂದ ವಿದ್ಯೆ ಕಲಿತು ಹೊಗಳಿಸಿಕೊಂಡು ಬಂದ. ಲೋಕದಲ್ಲಿ ಜ್ಞಾನಕ್ಕಿಂತಲೂ ಉತ್ತಮವಾದ ಐಶ್ವರ್ಯವಿಲ್ಲ ಮತ್ತು ಆ ಜ್ಞಾನವನ್ನು ಹಂಚುವುದು ಪುಣ್ಯದ ಕೆಲಸ ಈ ಎರಡು ಸಾಧನೆಗೂ ಭಾಜನನಾದ ವಿದ್ಯಾರ್ಥಿ ನಚಿಕೇತ. ನಚಿಕೇತನು ಕೂಡಾ ಅಷ್ಟಾವಕ್ರನಂತೆ ತಂದೆಯ ಕೋಪಕ್ಕೆ ಪಾತ್ರನಾಗಿದ್ದಂತವನು. ನಚಿಕೇತ ತನ್ನ ತಂದೆಯು ಮಾಡುತ್ತಿದಂಥ ದಾನದಲ್ಲಿ ದೋಷವನ್ನು ಕಂಡು ತಂದೆಯ ಕೋಪಕ್ಕೆ ಪಾತ್ರನಾಗಿ ಜ್ಞಾನವನ್ನು ಸಂಪಾದಿಸಿಕೊಂಡ. ಅವನು ಪಡೆದಂಥ ಜ್ಞಾನ ಸಾಮಾನ್ಯವಾದ ಲೌಕಿಕ ವಿಷಯಕ್ಕೆ ಸಂಬಂಧಿಸಿದ್ದಾಗಿರದೆ ಆತ್ಮಜ್ಞಾನ ಮತ್ತು ನಿಜವಾದ ಸುಖದ ಗುಟ್ಟನ್ನುತಿಳಿಯುವುದಕ್ಕೆ ಸಂಬಂಧಿಸಿದ್ದಂಥಾಗಿತ್ತು. ನಚಿಕೇತನ ಜ್ಞಾನದಾಹ ಎಷ್ಟಿತ್ತೆಂದರೆ ಅವನ ಗುರು ಯಮ ನಚಿಕೇತನನ್ನು ಮಹಾತ್ಮ ನಚಿಕೇತನನೆಂದೇ ಕರೆದ. ಅವನು ಯಮನಿಂದ ಕಲಿತ ಜ್ಞಾನವನ್ನು ತನ್ನ ಮಟ್ಟಿಗೆ ಮಾತ್ರ ಇಟ್ಟುಕೊಳ್ಳದೆ ಇಡೀ ಲೋಕಕ್ಕೆ ಆ ಜ್ಞಾನವನ್ನು ಪ್ರಸಾರ ಮಾಡಿದ. ಯಮನು ನಚಿಕೇತನಿಗೆ ಹೇಳಿದ ವಿದ್ಯೆ ಈ ರೀತಿ ಇತ್ತು "ಪ್ರಪಂಚದಲ್ಲಿ ಮನುಷ್ಯರಾಗಿ ಹುಟ್ಟುವುದೆ ಒಂದು ಭಾಗ್ಯ. ಅವನು ಒಳ್ಳೆಯವರ ಸ್ನೇಹ ಮಾಡಿ, ಒಳ್ಳೆಯದನ್ನು ಕಲಿತು ಎಲ್ಲರಿಗೂ ಒಳ್ಳೆಯದನ್ನು ಮಾಡಬೇಕು ಇದನ್ನೇ ಪುಣ್ಯವೆನ್ನುತ್ತೇವೆ. ಕೆಟ್ಟವರ ಸ್ನೇಹಮಾಡಿ ಕೆಟ್ಟ ಕೆಲಸಗಳನ್ನು ಮಾಡುವುದರ ಮೂಲಕ ಇತರರನ್ನು ನೋಯಿಸಿದರೆ ಪಾಪ".

ಆದ್ದರಿಂದ "ಪಾಪಮಾಡದವನು ಜ್ಞಾನವಂತ. ಪಾಪ ಮಾಡುವನು ಅಜ್ಞಾನಿ." ನಚಿಕೇತನು ಈ ಜ್ಞಾನವನ್ನು ಜನಸಾಮಾನ್ಯರೆಲ್ಲರಿಗೆ ತಿಳಿಯುವಂತೆ ಮಾಡಿ ಭಾರತದ ಸಂಸ್ಕೃತಿಗೆ ಅಡಿಪಾಯ ಹಾಕಿದ್ದಾನೆ. ನಚಿಕೇತನಂತೆ ನಿಜ ಜ್ಞಾನವನ್ನು ಪಡೆಯಲು ಇಚ್ಚೆಯುಳ್ಳ ವಿದ್ಯಾರ್ಥಿಗಳು ಅಪರೂಪವಾಗಿರುವ ಇಂದಿನ ಕಾಲದಲ್ಲಿ ನಚಿಕೇತನಂಥ ವಿದ್ಯಾರ್ಥಿ ಜ್ಞಾನಕ್ಷೇತ್ರದಲ್ಲಿ ಪ್ರಕಾಶಮಾನವಾಗಿ ಬೆಳಗುತ್ತಿರುತ್ತಾನೆ.

ಅಭಿಮನ್ಯು

ಅಭಿಮನ್ಯು ವೀರ ಬಾಲಕನಾಗಿ ಆದರ್ಶ ಪ್ರಾಯನಾದ ವ್ಯಕ್ತಿಯಾಗಿದ್ದಾನೆ. ಎಂಥ ಘೋರವಿಪತ್ತಿನಲ್ಲಿಯೂ ಎದೆ ಗುಂದದೆ ತನ್ನ ಗುರಿಯನ್ನು ಸಾಧಿಸುವ ಮತ್ತು ಸಾಧಿಸಿ ಅದರಲ್ಲಿ ಯಶಸ್ವಿಯಾಗುವ ಬಗೆ ನಮಗೆ ಅಭಿಮನ್ಯುವಿನ ಜೀವನದಿಂದ ದೊರೆಯುತ್ತದೆ. ಅಭಿಮನ್ಯು ಮಹತ್ತರವಾದ ಧೈರ್ಯವನ್ನು ಮತ್ತು ರಣನೀತಿಯನ್ನು ಅನುಸರಿಸುವುದಕ್ಕೆ ಮುಖ್ಯ ಕಾರಣ ಅವನು ಪಡೆದಿದ್ದ ಸಂಸ್ಕಾರ ಮತ್ತು ಶಿಕ್ಷಣ.

ಧ್ರುವ

ನಿಷ್ಠೆ ಮತ್ತು ಶ್ರದ್ಧೆ ಇದ್ದಲ್ಲಿ ಎಂಥ ಮಹತ್ತನ್ನಾದರೂ ಸಾಧಿಸಬಹುದೆನ್ನುವುದಕ್ಕೆ ಧ್ರುವ ಉತ್ತಮ ಉದಾಹರಣೆಯಾಗಿ ನಮಗೆ ದೊರೆಯುತ್ತಾನೆ. ಇವನ ದುರಾದೃಷ್ಟವೆಂದರೆ ಬಲತಾಯಿಯ ಕೋಪಕ್ಕೆ ಪಾತ್ರನಾಗಬೇಕಾಯಿತು ತಾಯಿ ಮತ್ತು ತಂದೆಯಿಂದ ಪಡೆಯಲಾಗದೆ ಇದ್ದ ಪ್ರೀತಿಯನ್ನು ಸಾಕ್ಷಾತ್ ದೇವರಿಂದಲೆ ಪಡೆಯಲು ಪ್ರಯತ್ನಿಸಿದ ಧ್ರುವನ ಪ್ರಯತ್ನ ನಿಜವಾಗಿಯೂ ಮೆಚ್ಚುವಂಥದ್ದಾಗಿದೆ. ಮಕ್ಕಳಲ್ಲಿ ಎಂಥ ಇಚ್ಛಾಶಕ್ತಿ ಅಡಗಿರುತ್ತದೆಂಬುದೂ ಮತ್ತು ಆ ಇಚ್ಛಾಶಕ್ತಿಗೆ ತಡೆವುಂಟಾದಲ್ಲಿ ಅದು ಇನ್ನೂ ಹೆಚ್ಚು ದ್ವಿಗುಣಿತವಾಗಿ ಹೇಗೆ ಹೊರಹೊಮ್ಮುತ್ತದೆಂದೂ ನಮಗೆ ಧ್ರುವನ ಜೀವನದ ಘಟನೆಗಳಿಂದ ಗೊತ್ತಾಗುತ್ತದೆ. ಯಾವುದೇ ಒಂದು ಉನ್ನತ ಉದ್ದೇಶದ ಸಾಧನೆಗೆ ಏಕಾಗ್ರತೆ ಬಹಳ ಮುಖ್ಯವೆಂದು ಸ್ವತಃ ಸಿದ್ಧವಾದ ಸಂಗತಿ. ಆದರೆ ಇಂದಿನ ಸಮಾಜದಲ್ಲಿ ವಿದ್ಯಾರ್ಥಿಗಳು ಏಕಾಗ್ರತೆಯಿಂದ ಅಧ್ಯಯನ ಮಾಡಲು ಸಾಧ್ಯವಿಲ್ಲದಿರುವಾಗ ಧ್ರುವನ ಏಕಾಗ್ರತೆ ನಮಗೆ ಒಳ್ಳೆಯ ಉದಾಹರಣೆಯಾಗಿ ದೊರೆಯುತ್ತದೆ. ಆದ್ದರಿಂದ ಇಂದಿನ ವಿದ್ಯಾರ್ಥಿಗಳು ಧ್ರುವನ ನಿಷ್ಠೆಯನ್ನು ತಿಳಿಯುವುದು ಸೂಕ್ತವೆಂದೆನಿಸುತ್ತದೆ.

ಪ್ರಹ್ಲಾದ

ಈಶನಾವಾಸವಿ ಜಗದೊಳಿಹುದೆಲ್ಲವು, ಈಶನಿಗೆ ಮೀಸಲಾಗಿಹುದೆಲ್ಲವು ಆಶಿಸದೆ ಏನನು ಆತನಿತ್ತದನುಂಡು ವಾಸಿಸೈ ನೀ ಸಂತಸದಿಂದಲಿ ಈ ಮಾತನ್ನು ಕಾಯಾ, ವಾಚಾ, ಮನಸಾ ಸಿದ್ಧಮಾಡಿ ತೋರಿಸಿದ ಅತ್ಯಂತ ಧೈರ್ಯವಂತ ಬಾಲಕ ಪ್ರಹ್ಲಾದ. ಪ್ರಹ್ಲಾದನ ಆಸ್ತಿಕತೆಯು ವೈಜ್ಞಾನಿಕವಾಗಿ ಪ್ರಶ್ನಾರ್ಹವಾಗಿದ್ದರು ಸಹ ಇಂದಿನ ವೈಜ್ಞಾನಿಕ ಯುಗದಲ್ಲಿ ಸಂಭವಿಸುತ್ತಿರುವ ಅನೇಕ ಪರಿಯ ಅನಾಹುತಗಳನ್ನು ಅವಲೋಕಿಸಿದಾಗ ಪ್ರಹ್ಲಾದ ತೋರಿಸಿಕೊಟ್ಟ ಕಾಣದ ದೈವೀ ಶಕ್ತಿಯ ಇರುವಿಕೆಯ ಅನುಭವ ಆಗುತ್ತಿರುವುದು ಮತ್ತು ಕಾಣದ ಆ ಶಕ್ತಿಗೆ ವಿಜ್ಞಾನಿಗಳೂ ತಲೆಬಾಗುತ್ತಿರುವುದು ವಿಸ್ಮಯಕಾರಿಯಾದ ಸಂಗತಿಯಾಗಿದೆ. ಪ್ರಹ್ಲಾದನಲ್ಲಿ ಅಗೋಚರ

ಶಕ್ತಿಯ ಬಗೆಗಿದ್ದ ದೃಢ ನಿಶ್ಚಯ ಇಂದಿನ ಯುವಪೀಳಿಗೆಗೆ ಪ್ರೇರಣೆಯನ್ನು ಕೊಡುವ ಸಂಗತಿಯಾಗಿದೆ. ಅದು ಪ್ರಪಂಚಕ್ಕೆಲ್ಲ ಒಳ್ಳೆಯದನ್ನು ಮಾಡಬಹುದೇನೋ.

ಸತ್ಯಕಾಮ

ಭಾರತದ ನಾಗರಿಕತೆಯನ್ನು, ವಿಶೇಷವಾಗಿ ಆಧ್ಯಾತ್ಮಿಕ ವಿಚಾರವನ್ನು ಬೆಳಗುತ್ತಿರುವ ಬಾಲಕರಲ್ಲಿ ಸತ್ಯಕಾಮ ಪ್ರಮುಖ. ಈತನು ಸ್ವಯಂ ಪ್ರೇರಣೆಯಿಂದ ಬ್ರಹ್ಮಚರ್ಯವನ್ನು ಸ್ವೀಕರಿಸಿದಂಥವನು ೧೨ ವರ್ಷಗಳ ಕಾಲ ಬ್ರಹ್ಮಚಾರಿಯಾಗಿದ್ದು ಗೌತಮ ಋಷಿಯ ಬಳಿ ಜ್ಞಾನವನ್ನು ಪಡೆದನು. ಸತ್ಯಕಾಮನು ನಿಜವಾದ ತಂದೆಯನ್ನು ಪಡೆದಿರಲಿಲ್ಲ ಗೌತಮ ಋಷಿ ಅವನ ತಂದೆಯ ಬಗ್ಗೆ ವಿಚಾರಿಸಿದಾಗ ಅವನು ಯಾವ ಸಂಕೋಚವೂ ಇಲ್ಲದೆ ತನಗೆ ಜನ್ಮ ಕೊಟ್ಟ ತಂದೆಯ ಹೆಸರು ಗೊತ್ತಿಲ್ಲವೆಂದೂ ಕೇವಲ ತಾಯಿಯ ಹೆಸರು ಗೊತ್ತೆಂದೂ ಹೇಳಿ ತನ್ನ ಪೂರ್ಣ ಹೆಸರು ಜಾಬಾಲ ಸತ್ಯಕಾಮ ಎಂದು ತಿಳಿಸಿದ. ಸತ್ಯಕಾಮನ ಈ ಸತ್ಯವಚನದಿಂದಲೆ ಗೌತಮ ಋಷಿ ಪ್ರಭಾವಿತನಾಗಿ "ನೀನು ಸತ್ಯವನ್ನು ನುಡಿದಿದ್ದಿಯೆ. ಆದ್ದರಿಂದ ತಿಳಿಯಬೇಕಾದ ಎಲ್ಲ ಜ್ಞಾನವನ್ನು ಆಗಲೇ ತಿಳಿದುಕೊಂಡಿದ್ದಿಯೇ ಎಂದು ಉದ್ಗರಿಸಿದ. ನಂತರ ಸತ್ಯಕಾಮನಿಗೆ ೪೦೦ ದುರ್ಬಲವೂ, ಕೃಶವೂ ಆದ ಹಸುಗಳನ್ನು ಕೊಟ್ಟು ಇವುಗಳ ಸಂಖ್ಯೆ ೧೦೦೦ ಕ್ಕೆ ಏರುವವರಗೆ ನೀನು ಕಾಡಿನಲ್ಲಿಯೆ ಇದ್ದು ಜ್ಞಾನ ಪಡೆ ಎಂದು ಆಜ್ಞಾಪಿಸಿದ. ಅದರಂತೆ ಸತ್ಯಕಾಮ ಆ ಬಡಹಸುಗಳನ್ನು ಕಾಡಿಗೆ ಹೊಡೆದುಕೊಂಡು ಹೋಗಿ ಅವುಗಳ ಸಂಖ್ಯೆ ೧೦೦೦ ಆಗುವವರೆಗೂ, ಹಂಸಪಕ್ಷಿಯಿಂದಲೂ, ಮದ್ದು ಎಂಬ ಪಕ್ಷಿವಿಶೇಷದಿಂದಲೂ ಜ್ಞಾನವನ್ನು ಪಡೆದ. ನಂತರ ಸತ್ಯಕಾಮ ಆಶ್ರಮಕ್ಕೆ ಹಿಂದಿರುಗಿದಾಗ ಗೌತಮರು "ನೀನು ಬ್ರಹ್ಮವೇತ್ತನಂತೆ ಕಾಣುತ್ತಿದ್ದಿಯೆ. ನಿನಗೆ ಯಾರು ಉಪದೇಶ ಕೊಟ್ಟರು ಎಂದು ಅವನನ್ನು ಕೇಳಿದರು. ಅದಕ್ಕೆ ಸತ್ಯಕಾಮನು "ಮನುಷ್ಯೇತರರಿಂದ ಎಂದು ಉತ್ತರ ಕೊಟ್ಟ! ಹೀಗೆ ಸತ್ಯಕಾಮನು ಪ್ರಕೃತಿಯಿಂದಲೇ ಆತ್ಮಜ್ಞಾನವನ್ನು ಪಡೆದು ಖ್ಯಾತಿವಂತನಾದ ಪ್ರಕೃತಿ ಮನುಷ್ಯನ ಅತ್ಯಂತ ದೊಡ್ಡಗುರು ಎಂಬ ಸಂಗತಿ ಸತ್ಯಕಾಮನ ವಿದ್ಯಾರ್ಜನೆಯ ರೀತಿಯಿಂದ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈಗ ಶಾಲಾ, ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ಬಂಧಿತರಾಗಿರುವ ವಿದ್ಯಾರ್ಥಿಗಳು ಸತ್ಯಕಾಮನ ಸ್ವತಂತ್ರ ವಿದ್ಯಾರ್ಜನೆಯ ರೀತಿ–ನೀತಿಯನ್ನು ತಿಳಿದು ಅಸೂಯೆಪಡಬಹುದೇನೊ?

ಭೀಮ್

ಡಾ|| ಭೀಮರಾವ್ ಅಂಬೇಡ್ಕರ್ ಎಂದು ಪ್ರಸಿದ್ಧನಾದ ಈ ಬಾಲಕ ಸಮಾಜದ ಅತ್ಯಂತ ಕೆಳಸ್ತರದಲ್ಲಿಯು ಸಮಾಜದಲ್ಲಿ ಜನ್ಮಪಡೆದಿದ್ದ. ಆದ್ದರಿಂದ ಮೇಲ್ವರ್ಗದವರಿಂದ ಕಿರುಕುಳಕ್ಕೆ ಒಳಗಾದ. ಆದರೂ ಸಹ ತನ್ನ ಮೇಧಾವಿತನದಿಂದ, ನಿಷ್ಠೆಯಿಂದ ವಿದ್ಯಾಭ್ಯಾಸ ಮಾಡಿ ದೊಡ್ಡ ಕಾನೂನು ಪಂಡಿತನಾದ. ಈತನ ಮೇಧಾವಿತನವನ್ನು ಗುರ್ತಿಸಿದ ಜನರು ಈತನಿಗೆ ಎಲ್ಲ ಬಗೆಯ ಪ್ರೋತ್ಸಾಹವನ್ನು ಕೊಟ್ಟರು. ಬರೋಡಾದ ಮಹಾರಾಜರ ಸಹಾಯದಿಂದ ಉನ್ನತ ವ್ಯಾಸಂಗಕ್ಕೆ ಅಮೇರಿಕಾಕ್ಕೆ ಹೋದ. ಅಮೇರಿಕಾದ ಮುಕ್ತ ಹಾಗೂ ಅನಿರ್ಬಂಧಿತ ಜೀವನದ ಪ್ರಭಾವ, ವಿದ್ಯಾರ್ಥಿ ಭೀಮನ ಮೇಲೆ ಉಂಟಾಯಿತು.ಆ ಸಂದರ್ಭದಲ್ಲಿ ಅವನ ಮೇಲೆ ಅಮೇರಿಕ ಸಂವಿಧಾನದ ವಿಶೇಷ ಪ್ರಭಾವ ಉಂಟಾಯಿತು. ಜ್ಞಾನಾರ್ಜನೆಗಾಗಿ

ಯಾವಾಗಲೂ ತುಡಿಯುತ್ತಿದ್ದ ಭೀಮನು ಪ್ರತಿದಿನ ೧೮ ಗಂಟೆಗಳ ಕಾಲ ಅಧ್ಯಯನ ಮಾಡುತ್ತಿದ್ದ. ಈ ಯುವಾವಸ್ಥೆಯಲ್ಲಿದ್ದಾಗ ಸುಮಾರು ೨೦೦೦ ಪುಸ್ತಕಗಳನ್ನು ಸಂಗ್ರಹ ಮಾಡಿದ್ದಲ್ಲದೆ ಅವುಗಳಲ್ಲಿ ಬಹಳಷ್ಟು ಪುಸ್ತಕಗಳನ್ನು ಓದಿದ್ದ. ಭೀಮನು ಸ್ವತಃ ಜಾತಿಪದ್ಧತಿಯಿಂದ ನೊಂದಿದ್ದರಿಂದ ಭಾರತದ ಜಾತಿಪದ್ಧತಿಗಳ ಬಗ್ಗೆ ವಿಶೇಷವಾದ ಅಧ್ಯಯನವನ್ನು ಮಾಡಿದ ಮುಂದೆ ಭಾರತಕ್ಕೆ ಹಿಂದಿರುಗಿದ ಮೇಲೆ ಜಾತಿ ನಿರ್ಮೂಲನದ ಬಗ್ಗೆ, ವಿಶೇಷವಾಗಿ ದಲಿತೋದ್ಧಾರದ ಬಗ್ಗೆ ತನ್ನ ಜೀವನವನ್ನೇ ಮುಡುಪಾಗಿಟ್ಟ.

ಸ್ವತಂತ್ರ ಭಾರತಕ್ಕೆ ಸಂವಿಧಾನವನ್ನು ತಯಾರಿಸುವ ಕಾರ್ಯ ನಡೆದಿತ್ತು. ಈ ಕಾರ್ಯ ಯಶಸ್ವಿಯಾಗಿ ಕೊನೆಗೊಳ್ಳಬೇಕಾದರೆ ಮತ್ತು ಪ್ರಜಾತಂತ್ರ ವ್ಯವಸ್ಥೆಗೆ ಅನುಗುಣವಾದ ಸಂವಿಧಾನವನ್ನು ರಚಿಸಬೇಕಾದರೆ ಅನೇಕ ಕಾನೂನು ಪಂಡಿತರ ಮತ್ತು ಪ್ರಪಂಚದ ವಿವಿಧ ದೇಶಗಳ ಸಂವಿಧಾನಗಳನ್ನು ತಿಳಿದಂಥ ವ್ಯಕ್ತಿಗಳ ಸಹಕಾರ ಅಗತ್ಯವಾಗಿತ್ತು. ಆದ್ದರಿಂದ ಸಹಜವಾಗಿಯೆ ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದ ಡಾ॥ ರಾಜೇಂದ್ರ ಪ್ರಸಾದ್ ಮತ್ತು ಪ್ರಧಾನಮಂತ್ರಿ ನೆಹರೂರರ ದೃಷ್ಟಿ ಭೀಮನ ಮೇಲೆ ಬಿತ್ತು ಆದ್ದರಿಂದ ಭೀಮ್ ಸಂವಿಧಾನ ರಚನಾಸಭೆಯ ಪ್ರಮುಖ ಸದಸ್ಯನಾಗಿ ಪ್ರಕಾಶಿಸಿದನು. ತನ್ನೆಲ್ಲ ವಿದ್ವತ್ತನ್ನು ಸಂವಿಧಾನ ರಚನೆಗಾಗಿ ಧಾರೆ ಎರೆದನು. ಆದ್ದರಿಂದ ಸ್ವತಂತ್ರ ಭಾರತದ ''ಸಂವಿಧಾನಶಿಲ್ಪಿ'' ಎಂಬ ಕೀರ್ತಿ ಭೀಮ್‌ನದಾಯಿತು.

ಡಾ॥ ಭೀಮ್‌ರಾವ್ ರಾಮ್‌ಜಿ ಅಂಬೇಡ್ಕರ್ ಎಂದು ಪ್ರಸಿದ್ಧನಾದ ಭೀಮನಿಗೆ ಮುಂದೆ ''ಭಾರತರತ್ನ'' ಪದವಿಯೂ ಸಹ ದೊರೆಯಿತು. ಭೀಮನ ಬಾಲ್ಯದಲ್ಲಿಯ ಕಷ್ಟ ಸಹಿಷ್ಣುತೆ, ಯೌವನದಲ್ಲಿಯ ಅಧ್ಯಯನಶೀಲತೆ, ಪ್ರೌಢಾವಸ್ಥೆಯಲ್ಲಿಯ ಕ್ರಿಯಾಶೀಲತೆ, ಸಂವಿಧಾನ ರಚನಾ ಸಭೆಯ ಸದಸ್ಯತ್ವದ ಅವಧಿಯಲ್ಲಿಯ ಏಕನಿಷ್ಠತೆ. ಇವೆಲ್ಲವೂ ಇಂದಿನ ವಿದ್ಯಾರ್ಥಿವರ್ಗಕ್ಕೂ, ಯುವಕರಿಗೂ, ಜವಾಬ್ದಾರಿ ಸ್ಥಾನದಲ್ಲಿರುವಂಥ ಸದಸ್ಯರುಗಳಿಗೂ ಆದರ್ಶಪ್ರಾಯವಾಗಿದೆ.

ಮೋಹನ

ಕರಮ್‌ಚಂದ್ ಮತ್ತು ಪುತಲಿಬಾಯಿಯವರ ಮಗನಾಗಿ ಜನಿಸಿದ ಮೋಹನ್ ಬಾಲ್ಯದಿಂದಲೂ ರಾಮಭಕ್ತನಾಗಿದ್ದ. ಮನೆಯ ಕೆಲಸದಾಕೆ ಅವನ ಮನಸ್ಸಿನ ಮೇಲೆ ರಾಮನಾಮದ ಮಹಿಮೆಯನ್ನು ಬಿತ್ತಿದಳು. ಮೋಹನನಲ್ಲಿ ರಾಮಭಕ್ತಿ ಹೆಮ್ಮರವಾಗಿ ಬೆಳೆಯಿತು. ರಾಮ ಸತ್ಯಸಂಧನಾಗಿದ್ದ ಆದ್ದರಿಂದ ರಾಮನ ಭಕ್ತನಾದ ಮೋಹನನೂ ಸಹ ಸತ್ಯಸಂಧನಾಗಿಯೆ ಬೆಳೆದ. ದೊಡ್ಡವನಾದಂತೆ ಸತ್ಯವನ್ನೇ ದೇವರೆಂದು ಕರೆದ. ಜೀವನದ ಪ್ರತಿಯೊಂದು ವ್ಯವಹಾರದಲ್ಲಿ ಸತ್ಯವೇ ಮೂಲಾಧಾರವಾಗಿರಬೇಕೆಂದು ನಿಶ್ಚಯಿಸಿದ. ತನ್ನ ಸತ್ಯದೊಂದಿಗಿನ ಪ್ರಯೋಗಗಳಿಂದ ತನ್ನ ಸುತ್ತಲಿನ ಸಮಾಜದ ಮೇಲೆ ಸತ್ಯದ ಪ್ರಭಾವ ಉಂಟಾಗುವಂತೆಯೂ ಮತ್ತು ಸತ್ಯವನ್ನು ಒಂದು ಮೌಲ್ಯವೆಂದು ಸ್ವೀಕರಿಸುವಂತೆಯೂ ಮಾಡಲು ಪ್ರಯತ್ನಿಸಿದ. ಸತ್ಯದ ಪ್ರಯೋಗದ ಫಲವನ್ನು ದಕ್ಷಿಣಾ ಆಫ್ರಿಕಾದಲ್ಲಿ ಕಂಡುಕೊಂಡ ಅಲ್ಲಿ ತಿಳಿದುಕೊಂಡ ಸತ್ಯದ ಶಕ್ತಿಯನ್ನು ತನ್ನ ಜನ್ಮಭೂಮಿ ಭಾರತದ ಬಿಡುಗಡೆಗಾಗಿ ಪ್ರಯೋಗಿಸಲು ಉದ್ಯುಕ್ತನಾದ. ಅತ್ಯಂತ ಬಲಿಷ್ಠ ಸರ್ಕಾರವಾಗಿದ್ದ ಇಂಗ್ಲೀಷರ ಆಡಳಿತವು ಮೋಹನನ ಈ ಸತ್ಯ ಪ್ರಯೋಗದ

ಮುಂದೆ ತಲೆಬಾಗಿಸಿತು. ಎಲ್ಲಿ ಸತ್ಯವಿದೆಯೊ ಅಲ್ಲಿ ಅಹಿಂಸೆಯಿದೆ. ಅಂದರೆ ಪ್ರೇಮವಿದೆ ಎಂಬ ಮಾತನ್ನು ತನ್ನ ಕಾರ್ಯಕ್ರಮಗಳ ಮೂಲಕ ಇಂಗ್ಲೀಷರಿಗೆ ಅವರ ದೋಷಗಳ ಮನವರಿಕೆ ಮಾಡಿಕೊಟ್ಟ.

ಸಾರ್ವಜನಿಕ ಜೀವನದಲ್ಲೂ ಮುಖ್ಯವಾಗಿ ರಾಜಕಾರಣದಲ್ಲೂ ಸತ್ಯವೇ ಪ್ರತಿಷ್ಠಾಪಿತವಾಗಿರಬೇಕೆಂದು ಮೋಹನನು ಪ್ರತಿಪಾದಿಸಿದ ಅದಕ್ಕಾಗಿ ದೇಶದ ಜನರಲ್ಲಿದ್ದ ಎಲ್ಲ ಬಗೆಯ ಭೇದ ಭಾವಗಳನ್ನು ಎಲ್ಲ ಬಗೆಯ ದೋಷಗಳನ್ನು ನಿರ್ಮೂಲನ ಮಾಡಲು ಕಂಕಣಬದ್ಧನಾದ. ಎಲ್ಲ ಧರ್ಮಗಳು ಒಂದೇ ತತ್ವವನ್ನು ಪ್ರತಿಪಾದಿಸುತ್ತವೆ. ಪ್ರತಿಯೊಬ್ಬರು ತಮ್ಮ ತಮ್ಮ ಧರ್ಮದ ಸಿದ್ಧಾಂತಗಳಂತೆ ತಮ್ಮ ತಮ್ಮ ಜೀವನವನ್ನು ರೂಪಿಸಿಕೊಳ್ಳುವುದರ ಮೂಲಕ ಏಕತೆಯನ್ನು ಸಾಧಿಸಬಹುದೆಂದು ಹೇಳಿದ. ಹೀಗೆ ತನ್ನ ೭೯ ವರ್ಷದ ಧೀರ್ಘ ಜೀವನವನ್ನು ಸತ್ಯ, ಅಹಿಂಸೆ, ಪ್ರೇಮ ಮುಂತಾದ ಸನಾತನ ಮೌಲ್ಯಗಳ ಸ್ಥಾಪನೆಗಾಗಿಯೆ ಮೀಸಲಾಗಿಟ್ಟಿದ್ದ. ರಾಮನಾಮದೊಂದಿಗೆ ತನ್ನ ಜೀವನವನ್ನು ಪ್ರಾರಂಭಿಸಿ ರಾಮನಾಮದೊಂದಿಗೇ ಜೀವನವನ್ನು ಮುಕ್ತಾಯಗೊಳಿಸಿದ ಮೋಹನ ಜನತೆಯ ದೃಷ್ಟಿಯಲ್ಲಿ ಮಹಾತ್ಮನಾಗಿ ಕಣ್ಮರೆಯಾದ.

ಸನ್ಮಾನ್ಯರಿಂದ

ಜನಪದ ವಿಚಾರದಲ್ಲಿ ವಿಚಾರ ಪ್ರಚೋದಕ ಲೇಖನಗಳು ಬರುತ್ತಿರುವುದು ಸಂತೋಷದ ವಿಷಯ. ಪತ್ರಿಕೆ ನಡೆಸುವುದುರ ಕಷ್ಟ ನನಗೆ ಗೊತ್ತು. ಓದುಗರು ಪ್ರಶ್ನೆ ಮಾಡುವ ಮನಸ್ಸನ್ನು ಬೆಳೆಸಿಕೊಂಡರೆ ನಿಮ್ಮ ಶ್ರಮ ಸಾರ್ಥಕವಾದಂತೆ.

ಎ. ವೆಂಕಟರಮಣಶೆಟ್ಟಿಶ, ಮೈಸೂರು.

***

ಜನಪದ ವಿಚಾರ ಪ್ರತಿ ತಿಂಗಳು ತಪ್ಪದೆ ತಲುಪುತ್ತಿದೆ.ಅದರಲ್ಲಿ ವಿಷಯಗಳು ನನಗೆ ಬಹಳ ಮೆಚ್ಚುಗೆಯಾಗಿವೆ. ಚಂದಾ ಹಣವನ್ನು ಕಳುಹಿಸಿದ್ದೇನೆ. ನಿಮ್ಮ ಕಾರ್ಯಕ್ಕೆ ಯಶಸ್ಸನ್ನು ಕೋರುತ್ತೇನೆ.

ಎಂ.ಜಿ. ಶಿವರಾಂ,
ಬೆಂಗಳೂರು.
(ದೂರವಾಣಿಯಲ್ಲಿ ತಿಳಿಸಿದ್ದು)

ಜನಪದ ನಿಲಯದ ಅಂತರಂಗದಲ್ಲಿ -೧೨

–ಸುರೇಂದ್ರ ಕೌಲಗಿ



ಮೇಲುಕೋಟೆಯಲ್ಲಿ ಇನ್ನೂ ಎರಡು ಪ್ರಮುಖ ಸಂಸ್ಥೆಗಳಿದ್ದವು. ಅವುಗಳಲ್ಲಿ ಒಂದು ಗ್ರಾಮ ಸ್ವಾವಲಂಬನಾ ಸಹಕಾರ ಸಂಘ, ಇನ್ನೊಂದು ನೇಕಾರರ ಸಹಕಾರ ಸಂಘ ಈ ಗ್ರಾಮಸ್ವಾವಲಂಬನ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ ಶ್ರೀ ಖಾದ್ರಿ ಶಾಮಣ್ಣನವರಿದ್ದರು. ಶಾಮಣ್ಣನವರು ಸಹ ವಿನೋಬಾರವರ ಭೂದಾನ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ವಿನೋಬಾರ ಪ್ರವಚನಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುತ್ತಿದ್ದರು. ಶಾಮಣ್ಣನವರ ಈ ತರ್ಜುಮೆಯಿಂದ ಸ್ವತಃ ವಿನೋಬಾ ಬಹಳ ಸಂತುಷ್ಟರಾಗುತ್ತಿದ್ದರು. ಪ್ರವಚನವನ್ನು ಕೇಳುತ್ತಿದ್ದ ಜನರು ಸಹ ಸಂತುಷ್ಟರಾಗುತ್ತಿದ್ದರು. ತರ್ಜುಮೆಯಲ್ಲಿ ಮೂಲ ಪ್ರವಚದ ಭಾವ ಮತ್ತು ಅರ್ಥ ಶಾಮಣ್ಣನವರ ಗಡಸು ಧ್ವನಿಯ ಕಾರಣದಿಂದಾಗಿ ಹೆಚ್ಚು ಸ್ಪುಟವಾಗಿ ಹೊರ ಹೊಮ್ಮುತ್ತಿದ್ದವು. ವಿನೋಬಾರ ಕರ್ನಾಟಕ ಯಾತ್ರೆಯಲ್ಲಿ ಇನ್ನೊರ್ವ ಉತ್ಕೃಷ್ಟ ಅನುವಾದಕರು ಅನಂತ ರಂಗಚಾರ್ ವಿನೋಬಾರ ಪಾದಯಾತ್ರೆ ಕರ್ನಾಟಕದಲ್ಲಿ ಜನಸಾಮಾನ್ಯರ ಮೇಲೆ ಪ್ರಭಾವ ಬೀರುವುದಕ್ಕೆ ಮತ್ತು ತನ್ನ ಯಶಸನ್ನು ಸಾಧಿಸುವುದಕ್ಕೆ ಇವರೀರ್ವರ ತರ್ಜುಮೆ ಬಹಳವಾಗಿ ಕಾರಣವಾಯಿತೆಂದು ಹೇಳಬಹುದು. ಖಾದ್ರಿ ಶಾಮಣ್ಣನವರು ಸಮಾಜವಾದದ ವಿಚಾರಕ್ಕೆ ಒಳಗಾಗಿದ್ದಂಥವರು ಡಾ॥ ರಾಮ್‌ಮನೋಹರ ಲೋಹಿಯಾರ ಸಮಾಜವಾದದ ವಿಚಾರಗಳನ್ನು ಚೆನ್ನಾಗಿ ಓದಿಕೊಂಡಿದ್ದರು. ಜಯಪ್ರಕಾಶ್ ನಾರಾಯಣರಿಂದಲೂ ಪ್ರಭಾವಿತರಾಗಿದ್ದಂಥ ವ್ಯಕ್ತಿ. ಕರ್ನಾಟಕದ ಹಿರಿಯ ಸಮಾಜವಾದಿಯಾಗಿದ್ದ ಶಾಂತವೇರಿಗೋಪಾಲಗೌಡರ ನಿಕಟ ಸಹವರ್ತಿಯೂ ಆಗಿದ್ದರು. ಸಮಾಜವಾದದ ಈ ಹಿನ್ನೆಲೆಯಿಂದ ಸರ್ವೋದಯ ವಿಚಾರಕ್ಕೆ ಶಾಮಣ್ಣ ಬಂದಿದ್ದರಾದ್ದರಿಂದ ಮತ್ತು ಭೂಸಮಸ್ಯೆಯ ಪರಿಹಾರದ ಬಗ್ಗೆ ತೀವ್ರ ಆಸಕ್ತಿವುಳ್ಳವರಾಗಿದ್ದ ವಿನೋಬಾರ ಭೂದಾನ ಯಾತ್ರೆ ಶಾಮಣ್ಣನವರನ್ನು ಸಹಜವಾಗಿಯೇ ಆಕರ್ಷಿಸಿತ್ತು. ಕರ್ನಾಟಕದ ಗಾಂಧೀ ವಿಚಾರ ಚಿಂತಕರಲ್ಲಿ ಒಬ್ಬರಾಗಿದ್ದ ಸಿದ್ಧವನಹಳ್ಳಿ ಕೃಷ್ಣಶರ್ಮರ ಪ್ರಭಾವವಲಯಕ್ಕೂ ಖಾದ್ರಿಯವರು ಒಳಗಾಗಿದ್ದರು. ಸಿದ್ಧವನಹಳ್ಳಿ ಕೃಷ್ಣಶರ್ಮರಿಂದ ಗಾಂಧೀ ವಿಚಾರವನ್ನು ಹೆಚ್ಚು ತಿಳಿದುಕೊಂಡಿದ್ದರು. ಜೊತೆಗೆ ಸಿದ್ಧವನಹಳ್ಳಿಯವರ ಕನ್ನಡ ಭಾಷಾ ಶೈಲಿಯನ್ನು ಕರಗತಮಾಡಿಕೊಂಡಿದ್ದರು. ಶಾಮಣ್ಣನವರು ಕೆಲಕಾಲ ಗಾಂಧೀಯವರ ಸೇವಾಗ್ರಾಮ ಆಶ್ರಮದಲ್ಲಿಯೂ ಇದ್ದರು. ಮತ್ತು ಗಾಂಧೀಯವರ ಆರ್ಶೀವಾದದೊಂದಿಗೆ ಅಲ್ಲಿ ಕರ್ನಾಟಕದ ಓರ್ವ ಕನ್ಯೆಯೊಂದಿಗೆ ವಿವಾಹಿತರಾಗಿದ್ದರು. ಪ್ರಜಾವಾಣಿ ಕನ್ನಡ ದಿನಪತ್ರಿಕೆಯ

ಸಂಪಾದಕರಾಗಿದ್ದರು. ನಂತರ ಕನ್ನಡಪ್ರಭ ಮತ್ತು ಸಂಯುಕ್ತಕರ್ನಾಟಕ ದಿನಪತ್ರಿಕೆಗಳ ಸಂಪಾದಕರಾಗಿಯೂ ಇದ್ದರು.ಗೋಕುಲ ಎಂಬ ವಾರಪತ್ರಿಕೆಯ ಸಂಪಾದಕರೂ ಆಗಿದ್ದರು. ಹೀಗೆ ಹತ್ತಾರು ಹಿರಿಯ ವ್ಯಕ್ತಿಗಳ ಪ್ರಭಾವ ಅವರ ಮೇಲೆ ಬಿದ್ದುದರಿಂದ ಮತ್ತು ಕನ್ನಡಭಾಷೆಯ ಮೇಲೆ ಹಿಡಿತ ಸಾಧಿತವಾದುದರಿಂದ ವಿನೋಬಾರ ಹಿಂದಿ ಪ್ರವಚನಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುವಾಗ ಶಾಮಣ್ಣನವರ ಇಡೀ ವೈಚಾರಿಕ ವ್ಯಕ್ತಿತ್ವವೆ ಮೈದಳೆದು ಬರುತ್ತಿತ್ತು. ಭಾವುಕರಾಗುತ್ತಿದ್ದರು. ಏರುಧ್ವನಿಯಿಂದ ಮಾತನಾಡುತ್ತಿದ್ದರು. ಮೂಲ ವಿಚಾರಗಳು ವಿನೋಬಾರವರದೆ ಆಗಿರುತ್ತಿದ್ದರೂ ಸಹ ಅನುವಾದ ಮಾಡುವಾಗ ಆ ವಿಚಾರಗಳು ಸ್ವಂತದ್ದೆ ಎನ್ನುವ ರೀತಿಯಲ್ಲಿ ಶಾಮಣ್ಣನವರು ತರ್ಜುಮೆ ಮಾಡುತ್ತಿದ್ದರು. ಕೃಷ್ಣವರ್ಣದ ಅಷ್ಟು ಎತ್ತರವೂ ಅಲ್ಲದ ಅಷ್ಟು ಕುಳ್ಳವೂ ಅಲ್ಲದ ದಪ್ಪ ಶರೀರದ ನೀಳವಾದ ಮೂಗಿನ ವ್ಯಕ್ತಿತ್ವವನ್ನು ಶಾಮಣ್ಣ ಹೊಂದಿದ್ದರು. ಶುಭ್ರ ಖಾದಿ ಕಚ್ಚೆಪಂಚೆಯನ್ನುಟ್ಟು, ಖಾದಿ ಶುಭ್ರ ಜುಬ್ಬವನ್ನು ಧರಿಸಿ, ಬಣ್ಣದ ಖಾದಿ ವೈಸ್ಟ್‌ಕೋಟ್ ಧರಿಸಿ ಧೃಢವಾದ ಹೆಜ್ಜೆಗಳನ್ನು ಹಾಕುತ್ತ ಸಹಚರರೊಂದಿಗೆ ಆತ್ಮೀಯವಾಗಿ ದೊಡ್ಡ ಧ್ವನಿಯಲ್ಲಿ ಮಾತನಾಡುತ್ತಾ ಅನೇಕ ಸಲ ಗಟ್ಟಿಯಾಗಿ ನಗುತ್ತ ಮುನ್ನಡೆಯುತ್ತ ಹೋದರೆ ಶಾಮಣ್ಣನವರ ವ್ಯಕ್ತಿತ್ವ ಪೂರ್ಣಗೊಂಡಂತೆ. ಕನ್ನಡದ ಮೇಲೆ ಎಷ್ಟೊಂದು ಪ್ರಭುತ್ವ ಅವರಿಗಿತ್ತೊ ಅಷ್ಟೇ ಪ್ರಭುತ್ವ ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳ ಮೇಲೂ ಇತ್ತು. ವಾದಕ್ಕೆ ನಿಂತರೆ ಶಾಮಣ್ಣನವರನ್ನು ಸುಲಭವಾಗಿ ಸೋಲಿಸುವಂತಿರಲಿಲ್ಲ. ಇಂಥ ಓರ್ವ ಸಮಾಜ ಸೇವಕನ ಹೆಸರನ್ನು ಮೊಟ್ಟ ಮೊದಲಬಾರಿಗೆ ನಾನು ಬಿಹಾರಿನಲ್ಲಿ ಜಯಪ್ರಕಾಶ್ ನಾರಾಯಣರಿಂದಲೇ ಕೇಳಿದ್ದೆ. ಅಂದಿನಿಂದ ಶಾಮಣ್ಣ ಎಂಬ ವ್ಯಕ್ತಿಯನ್ನು ನೋಡುವ ಕುತೂಹಲ ನನ್ನಲ್ಲಿ ಇತ್ತು. ಆದರೆ ಮುಂದೊಂದು ದಿನ ಖಾದ್ರಿ ಶಾಮಣ್ಣನವರ ಸ್ವಂತ ಊರನ್ನೇ ನನ್ನ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಳ್ಳುತ್ತೇನೆಂಬ ಕನಸು ಆಗ ನನಗಿರಲಿಲ್ಲ. ಮುಂದೆ ಮೈಸೂರಿನಲ್ಲಿ ೧೯೫೭ರ ಸುಮಾರಿನಲ್ಲಿ ಮೈಸೂರಿನ ಬಳಿ ಇಲ್ವಾಲದಲ್ಲಿ ನಡೆದ ಗ್ರಾಮದಾನ ಪರಿಷತ್‌ನಲ್ಲಿ ಜೆ.ಪಿ. ಯವರೊಂದಿಗೆ ಭಾಗವಹಿಸಲು ನಾನು ಮೈಸೂರಿಗೆ ಬಂದಿದ್ದಾಗ ನನ್ನ ಮನಸ್ಸಿನ ಕುತೂಹಲಕ್ಕೆ ಕಾರಣವಾಗಿದ್ದ ಖಾದ್ರಿ ಶಾಮಣ್ಣನವರನ್ನು ಮೊದಲ ಬಾರಿಗೆ ನೋಡಿದೆ. ಅವರ ಪರಿಚಯವೂ ಆಗುತ್ತಾ ಹೋಯಿತು.

ವಿನೋಬಾ ಮೈಸೂರಿನಲ್ಲಿ ತಂಗಿದ್ದಾಗ ಶಾಮಣ್ಣನವರು ದುರಾದೃಷ್ಟವಶಾತ್ ಅಪಘಾತಕ್ಕೊಳಗಾಗಿ ತಮ್ಮ ಕಾಲಿನ ಮೂಳೆಯನ್ನು ಮುರಿದುಕೊಂಡರು. ಅದರಿಂದಾಗಿ ಅವರು ಕೆ.ಆರ್. ಆಸ್ಪತ್ರೆಯನ್ನು ಸೇರಿಕೊಳ್ಳಬೇಕಾಯಿತು. ಅವರು ಆಸ್ಪತ್ರೆಯಲ್ಲಿದ್ದಾಗ ಹಲವಾರು ಬಾರಿ ಭೇಟಿಮಾಡಿ ನಾನು ಮಾತನಾಡಿದ್ದೆ.

ಶಾಮಣ್ಣನವರು ಆಸ್ಪತ್ರೆ ಸೇರಿದ ನಂತರ ವಿನೋಬಾರ ಪ್ರವಚನದ ಕನ್ನಡ ಅನುವಾದವನ್ನು ಮಾಡುವ ಜವಬ್ದಾರಿ ಅನಂತರಂಗಾಚಾರ್‌ರವರ ಮೇಲೆ ಬಿತ್ತು. ಇವರು ಸಹ ಕನ್ನಡದಲ್ಲಿ ಸರಾಗವಾಗಿ ಮಾತನಾಡುತ್ತಿದ್ದರು. ಉತ್ತಮವಾಗಿಬರೆಯುತ್ತಿದ್ದರು. ಇವರು ಬಹಳ ಉತ್ಸಾಹಿ ವ್ಯಕ್ತಿ. ಇವರ ಉತ್ಸಾಹ ಎಷ್ಟರ ಮಟ್ಟಿಗೆ ಇರುತ್ತಿತ್ತೆಂದರೆ ಅನೇಕ ಸಲ ಇವರ ತರ್ಜುಮೆ ವಿನೋಬಾರ ಮೂಲ ಮಾತುಗಳಿಗೆ ಹೆಚ್ಚಿನ ರಸವನ್ನು ತುಂಬಿಬಿಡುತ್ತಿತ್ತು. ಹಾವ-ಭಾವಗಳನ್ನು ಸಹ ಜೋಡಿಸುತ್ತಿದ್ದರು. ಹೀಗಾಗಿ ಅನಂತರಂಗಾಚಾರ್‌ರವರು ತರ್ಜುಮೆಗೆ ನಿಂತಾಗ ಸಭಿಕರಿಗೆ ಎಲ್ಲಿಲ್ಲದ ಆನಂದ. ವಿನೋಬಾರವರ ಪಾದಯಾತ್ರೆ ಕರ್ನಾಟಕದಿಂದ ಕೇರಳಕ್ಕೆ ಪ್ರವೇಶ ಮಾಡಿದ ಮೇಲೆ ಶಾಮಣ್ಣನವರು ಮೈಸೂರಿನಲ್ಲಿ

ಪ್ರಾರಂಭಗೊಂಡ ಗಾಂಧೀ ಗ್ರಂಥಮಾಲೆಯ ಸಂಪಾದಕರಲ್ಲೊಬ್ಬರಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದರು. ಈ ಗ್ರಂಥಮಾಲೆಗೆ ಪ್ರೊ||ಎಂ.ಯಾಮುನಾಚಾರ್ಯರು ಪ್ರಧಾನ ಸಂಪಾದಕರಾಗಿದ್ದರು. ಶ್ರೀ ಅನಂತರಂಗಾಚಾರ್‌ರು ಮೈಸೂರು ನಗರದಲ್ಲಿ ಗಾಂಧೀ ಶಾಂತಿ ಪ್ರತಿಷ್ಠಾನದ ಕಾರ್ಯಕರ್ತನಾಗಿ ಕೆಲಸ ಮಾಡಲು ಪ್ರಾರಂಭಿಸಿದರು. ಅವರು ಮೈಸೂರಿಗೆ ಬರುವ ಮೊದಲು ಗುಲ್ಬರ್ಗಾ ನಗರದಲ್ಲಿ ಅದೇ ಶಾಂತಿ ಪ್ರತಿಷ್ಠಾನದ ಕಾರ್ಯಕರ್ತರಾಗಿ ಹಲವಾರು ವರ್ಷ ಕೆಲಸ ಮಾಡಿದ್ದರು. ಅಲ್ಲಿ ಅನಂತರಂಗಾಚಾರ್‌ರವರು ತಮ್ಮ ಕಾರ್ಯ ವೈಖರಿಯ ಬಲದಿಂದ ಬಹಳ ಜನಪ್ರಿಯರಾಗಿದ್ದರು. ಆ ನಗರದ ಎಲ್ಲ ಕ್ಷೇತ್ರಗಳಲ್ಲಿಯ ಎಲ್ಲ ಪ್ರಮುಖ ವ್ಯಕ್ತಿಗಳು ಇವರ ಸಂಘಟನಾ ಚಾತುರ್ಯಕ್ಕೆ ಮಾರುಹೋಗಿದ್ದರು. ಅವರು ಗುಲ್ಬರ್ಗಾ ನಗರವನ್ನು ಬಿಡದೆ ಅಲ್ಲಿಯೇ ಕೆಲಸ ಮಾಡಿಕೊಂಡಿದ್ದರೆ ಸರ್ವೋದಯ ಕೆಲಸಕ್ಕೆ ಬಲಬರುತ್ತಿತ್ತು. ಆದರೆ ಅವರು ಮೈಸೂರಿಗೆ ಬರುವ ತೀರ್ಮಾನ ಕೈಗೊಂಡರು. ಅದೊಂದು ದುರದೃಷ್ಟಕರ ತೀರ್ಮಾನವಾಗಿತ್ತೆಂದೇ ಹೇಳಬಹುದು. ಇಂಥ ಅನುಭವದೊಂದಿಗೆ ಅನಂತರಂಗಾಚಾರ್ ಮೈಸೂರು ನಗರದಲ್ಲಿ ಗಾಂಧೀ ಶಾಂತಿ ಪ್ರತಿಷ್ಠಾನದ ಕೆಲಸವನ್ನು ಪ್ರಾರಂಭಿಸಿದರು. ಇವರು ಮೈಸೂರಿಗೆ ಬರುವ ಮುನ್ನ ಶಾಂತಿ ಪ್ರತಿಷ್ಠಾನದ ಕೆಲಸವನ್ನು ಕೆ.ಎಸ್. ನಾರಾಯಣಸ್ವಾಮಿಯವರು ನಿರ್ವಹಿಸುತ್ತಿದ್ದರು. ನಾರಾಯಣಸ್ವಾಮಿಯವರದು ಬಹಳ ಸೌಮ್ಯ ವ್ಯಕ್ತಿತ್ವ. ಅವರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಕೆಲಸ ಮಾಡುತ್ತಾ ಮೈಸೂರು ನಗರದ ಸಾರ್ವಜನಿಕ ರಂಗದಲ್ಲಿ ಗಾಂಧೀ ಶಾಂತಿ ಪ್ರತಿಷ್ಟಾನಕ್ಕೆ ಒಂದು ಮಹತ್ವದ ಹಾಗೂ ಗೌರವಯುತವಾದ ಸ್ಥಾನವನ್ನು ತಂದುಕೊಟ್ಟಿದ್ದರು. ಮೇಲುಕೋಟೆಯಲ್ಲಿದ್ದ ಗ್ರಾಮ ಸ್ವಾವಲಂಬನಾ ಸಹಕಾರ ಸಂಘ ಖಾದ್ರಿ ಶಾಮಣ್ಣನವರ ನೇತೃತ್ವದಲ್ಲಿ ನಡೆಯುತ್ತಿತ್ತು. ಶಾಮಣ್ಣನವರು ಹೆಚ್ಚಾಗಿ ಮೈಸೂರು ಮತ್ತು ಬೆಂಗಳೂರಿನಲ್ಲಿರುತ್ತಿದ್ದರು. ಸಮಯ ಸಿಕ್ಕಾಗ ಮತ್ತು ಅಗತ್ಯವೆನಿಸಿದಾಗ ಮೇಲುಕೋಟೆಗೆ ಬರುತ್ತಿದ್ದರು. ಆಗ ಕಲ್ಯಾಣಿಬೀದಿಯಲ್ಲಿದ್ದ ತಮ್ಮ ಪೂರ್ವಿಕರ ಹಳೆಯ ಮನೆಯಲ್ಲಿರುತ್ತಿದ್ದರು. ಅವರ ತಂದೆ ದೇಶಿಕಾಚಾರ್ಯರು ಮತ್ತು ತಾಯಿ ರುಕ್ಮಿಣಮ್ಮ ಆ ಮನೆಯಲ್ಲಿರುತ್ತಿದ್ದರು. ಶಾಮಣ್ಣನವರು ಮೇಲುಕೋಟೆಗೆ ಬಂದು ಆ ಮನೆಯಲ್ಲಿರುವಾಗಲೆಲ್ಲ ಮೇಲುಕೋಟೆಯ ಅವರ ವಿಶ್ವಾಸಿಗಳು, ಸ್ನೇಹಿತರು ಅವರನ್ನು ಭೇಟಿ ಮಾಡಲು ಬರುತ್ತಿದ್ದರು. ಅಂಥ ಸಮಯದಲ್ಲೆಲ್ಲಾ ಶಾಮಣ್ಣನವರು ಅಂದಿನ ರಾಜಕೀಯ ವಿಚಾರಗಳನ್ನು ಕುರಿತು ಸ್ವಾರಸ್ಯಕರವಾಗಿ ಎಲ್ಲರೊಂದಿಗೆ ಮಾತನಾಡುತ್ತಿದ್ದರು. ಶಾಮಣ್ಣನವರ ಅಂಥ ಭೇಟಿಯ ಸಮಯದಲ್ಲೆಲ್ಲಾ ನಾನು ಸಹ ಅಲ್ಲಿ ಇದ್ದು ಶಾಮಣ್ಣನವರ ಸಹವಾಸವನ್ನು ಅನುಭವಿಸುತ್ತಿದ್ದೆ.

(ಮುಂದುವರಿಯುವುದು......)

ವಾಚಕ ಮಿತ್ರರಲ್ಲಿ ವಿನಂತಿ.

ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಂದ ಪ್ರಸ್ತುತ ವಿಷಯುಗಳಿಗೆ ಸಂಬಧಿಸಿದಂತೆ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿಕೊಡಲು ಆಸಕ್ತಿಯುಳ್ಳ ಸ್ನೇಹಿತರ ಸಹಾಯವನ್ನು ಜನಪದ ವಿಚಾರ ಬಯಸುತ್ತದೆ. ಸ್ವತಂತ್ರ ವಿಚಾರದ ಲೇಖನಗಳನ್ನೂ ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

******

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ ೧೦೦/- ರೂ. ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ಪ್ರಕಾಶಕರು



KA-SKMND-470-2003-05
Regd. no. KAR/KAN/2000/3820

ತೆರೆದ-ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com